ಕರ್ನಾಟಕದಲ್ಲಿ ಬಿಟ್ಟಿ ಚಾಕ್ರಿ

ಜೀತ ಪದ್ಧತಿಯಂತಹ ಒಂದು ಅಮಾನವೀಯ ಆಚರಣೆ

ಉತ್ತರ ಕರ್ನಾಟಕದ ದಲಿತ ಸಮುದಾಯದಲ್ಲಿ ಇನ್ನೂ ಜೀವಂತ



ಜೀವಿಕ

ಬಂಧನ ಮುಕ್ತ ಜೀವನ

ಜೀತ ವಿಮುಕ್ತ ಕರ್ನಾಟಕ

ಭಾರತ ಸಂವಿಧಾನ

ಪ್ರಸ್ತಾವನೆ

ಭಾರತದ ಜನರಾದ ನಾವು
ಭಾರತವನ್ನು ಒಂದು
ಸಾರ್ವಭೌಮ ಸಮಾಜವಾದಿ ಧರ್ಮಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ**;

ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ**;

ಸ್ಥಾನಮಾನ ಮತ್ತು ಅವಕಾಶಗಳಲ್ಲಿ **ಸಮಾನತೆ**
ದೊರೆಯುವಂತೆ ಮಾಡಲು; ಹಾಗೂ
ವ್ಯಕ್ತಿಯ ಘನತೆಯನ್ನು ಮತ್ತು ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಖಾತ್ರಿಗೊಳಿಸಿ

ಅವರೆಲ್ಲರಲ್ಲಿ **ಸೋದರತ್ವ**

ವೃದ್ಧಿಗೊಳಿಸಲು ದೃಢಸಂಕಲ್ಪ ಮಾಡಿದವರಾಗಿ:
ನಮ್ಮ ಸಂವಿಧಾನ ಸಭೆಯಲ್ಲಿ
1949ನೇ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೇ ಈ ದಿನ ಈ ಮೂಲಕ
ಈ ಸಂವಿಧಾನವನ್ನು
ಅಂಗೀಕರಿಸುತ್ತೇವೆ, ಜಾರಿಗೊಳಿಸುತ್ತೇವೆ ಮತ್ತು ಆತ್ಮಾರ್ಪಿಸಿಕೊಳ್ಳುತ್ತೇವೆ.

ಸಂವಿಧಾನ ದಿನ 26 ನವೆಂಬರ್
ಅಂಬೇಡ್ಕರ್ ಜಯಂತಿ –ಘನತೆ ದಿನ - ಸಾಮರಸ್ಯ ದಿನ 14 ಎಪ್ರಿಲ್

ಕರ್ನಾಟಕದಲ್ಲಿ ಬಿಟ್ಟಿ ಚಾಕ್ರಿ

ಜೀತ ಪದ್ಧತಿಯಂತಹ ಒಂದು ಅಮಾನವೀಯ ಆಚರಣೆ

ಉತ್ತರ ಕರ್ನಾಟಕದ ದಲಿತ ಸಮುದಾಯದಲ್ಲಿ ಇನ್ನೂ ಜೀವಂತ

ಕಿರಣ ಕಮಲ ಪ್ರಸಾದ

Karnatakadalli Bitti Chakri : ASummary of the Report on the Findings of the Survey in the 15 Districts of North Karnataka by Kiran Kamal Prasad.

ಫೆಬ್ರವರಿ 23, 2019

ಪ್ರತಿಗಳು : 4,000

ಪ್ರಕಾಶಕರು : ಜನಜಾಗೃತಿ ಪ್ರಕಾಶನ,
1289/4, ಐಸೆಕ್ ರಸ್ತೆ, ನಾಗರಭಾವಿ, ಬೆಂಗಳೂರು – 560072
ದೂರವಾಣಿ : 080–23214214

ಬೆಂಬಲ ಬೆಲೆ : ರೂ. 20/–

ಮುದ್ರಣ ಮತ್ತು ವಿನ್ಯಾಸ : ಶ್ರೀಚ ಪ್ರಿಂಟರ್ಸ್, ಬೆಂಗಳೂರು, 080–23218612

ಉತ್ತರ ಕರ್ನಾಟಕದಲ್ಲಿ ಇನ್ನೂ ಜೀವಂತವಿರುವ ಬಿಟ್ಟಿ ಚಾಕ್ರಿ
ಏನಿದು ಬಿಟ್ಟಿ ಚಾಕ್ರಿ?
ಅದು ಕೂಡಾ 21ನೇ ಶತಮಾನದ ಈ ಅತ್ಯಾಧುನಿಕ ಯುಗದಲ್ಲಿ!

ಬಿಟ್ಟಿ ಚಾಕ್ರಿ ಹೆಸರೇ ತಿಳಿಸುವಂತೆ ಮಜೂರಿ ಇಲ್ಲದೇ ಮಾಡಲೇ ಬೇಕಾದ ಕೆಲಸ. ಇದು ಸಂಪ್ರದಾಯದಿಂದ ಬಂದ ನಿರ್ಬಂಧದ ಕೆಲಸ. ದಿನಕ್ಕೆ ಕೆಲವೇ ಗಂಟೆಗಳಾದರೂ ಇದನ್ನು ಪ್ರತಿದಿನ ವರ್ಷವಿಡೀ ವರ್ಷಗಟ್ಟಲೆ ಮಾಡುತ್ತಲೇ ಇರಬೇಕು.

ಆದರೆ ಇದರ ಬಗ್ಗೆ ಇಲ್ಲಿಯ ವರೆಗೆ ಯಾವುದೇ ವೇದಿಕೆಯಲ್ಲಿ ಪ್ರಸ್ತಾಪವಾಗಿಲ್ಲ. ಜೀತ ಪದ್ಧತಿ ರದ್ದತಿ ಕಾನೂನು, 1976 ಬಂದ ಮೇಲೆಯೂ ಬಿಟ್ಟಿ ಚಾಕ್ರಿ ಪದ್ಧತಿಯು ಆ ಕಾನೂನಿನ ವ್ಯಾಪ್ತಿಯೊಳಗೆ ಬರುತ್ತದೆಯೇ ಎಂದು ಯಾವುದೇ ಸಂಘಟನೆ ಅಥವಾ ಸಂಘಟಕರು ಯೋಚಿಸಿಯೇ ಇರಲಿಲ್ಲ. ಯಾವುದೇ ಸಮಾಜ ಸುಧಾರಕರು ಅಥವಾ ಸಮಾಜ ಶಾಸ್ತ್ರೀಯ ಪಂಡಿತರು ತಲೆ ಕೆಡಿಸಿ ಕೊಂಡಿರಲಿಲ್ಲ. ಯಾವುದೇ ಕಾನೂನು ಪಂಡಿತರು ಅಥವಾ ನ್ಯಾಯವಾದಿಗಳು – ನ್ಯಾಯಮೂರ್ತಿಗಳು ಕಾನೂನಿನ ಸಾಮಾರ್ಥ್ಯವನ್ನು ಪರೀಕ್ಷಿಸಿರಲಿಲ್ಲ. ಯಾವುದೇ ಜನಪ್ರತಿನಿಧಿಯು ಅಥವಾ ಸಂವಿಧಾನ – ಕಾನೂನು ಅನುಷ್ಠಾನಗೊಳಿಸುವ ಹೆಸರಲ್ಲಿ ಕಾರ್ಯತತ್ಪರರಾಗಬೇಕಾಗಿದ್ದ ಅಧಿಕಾರಿಯು ಎಚ್ಚರ ವಹಿಸಿರಲಿಲ್ಲ. ಏಕೆ ಎಂಬುದೇ ನಿಗೂಢ.

ಆದರೂ ಬಿಟ್ಟಿ ಚಾಕ್ರಿ ಪದ್ಧತಿಯು ಜೀವಂತ. ಅದರ ನಿರ್ಬಂಧಕ್ಕೊಳಗಾಗಿರುವವರು ದಲಿತರು. ದಲಿತರಲ್ಲಿ ಹೆಚ್ಚಾಗಿ ಮಾದಿಗ ಸಮುದಾಯದವರು. ಅದು ಈಗ ಉತ್ತರ ಕರ್ನಾಟಕದ ಎಲಾ ಜಿಲ್ಲೆಗಳಿಗೆ ಸೀಮಿತವಾಗಿದೆ. ಕೆಲವು ವರ್ಷಗಳ ಹಿಂದೆ ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿಯೂ ಇದ್ದಿತ್ತೆಂದು ಹಿರಿಯರಿಂದ ಕೇಳಿಬರುತ್ತಿದೆ.

ಕರ್ನಾಟಕದಲ್ಲಿ ಜೀತ ಪದ್ಧತಿಯ ನಿರ್ಮೂಲನೆಯಾಗಬೇಕೆಂದು ಪಣತೊಟ್ಟು 1990ರಲ್ಲಿ ಜನ್ಮ ತಳೆದ ಜೀತ ವಿಮುಕ್ತಿ ಕರ್ನಾಟಕ – ಜೀವಿಕ ಸಂಘಟನೆಗೂ ಸುಮಾರು ಕಾಲದ ತನಕ ಅದರ ಬಗ್ಗೆ ಗಮನ ಹರಿದಿರಲಿಲ್ಲ. 2012ರ ಕೊನೆಗೆ ಜೀವಿಕದ ಉತ್ತರ ಕರ್ನಾಟಕದ ಸೂಕ್ಷ್ಮಮತಿಯ ಜಾತಿ–ಜೀತ–ಬಿಟ್ಟಿ ಚಾಕ್ರಿಯ ನೋವನ್ನುಂಡ ಪ್ರಜ್ಞಾವಂತ ಸಂಘಟಕರೊಬ್ಬರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ ಆಚರಣೆಯಲ್ಲಿದ್ದ ಬಿಟ್ಟಿ ಚಾಕ್ರಿ ಬಗ್ಗೆ ಜೀವಿಕದ ಗಮನ ಸೆಳೆದರು. ಅಲ್ಲಿಯ ಇತರ ಸಂಘಟಕರ ಜೊತೆ ಜೀವಿಕ ರಾಜ್ಯ ಸಂಚಾಲಕರೂ ಸೇರಿ ಬಿಟ್ಟಿ ಚಾಕ್ರಿ ಬಗ್ಗೆ ವಿಸ್ತೃತ ಮಾಹಿತಿ ಕಲೆಹಾಕ ತೊಡಗಿದರು. ರಾಜ್ಯ ಸಂಚಾಲಕರು ತಾವು ಆಗಲೇ ಸಿದ್ಧಿ

ಜನಾಂಗದ ಬಗ್ಗೆ ನಡೆಸಲು ತೊಡಗಿದ್ದ ಮುಂದುವರಿದ ಅಧ್ಯಯನವನ್ನು ಬದಲಾಯಿಸಿ ಬಿಟ್ಟಿ ಚಾಕ್ರಿ ಕುರಿತು ಆಳವಾದ ಹೊಸ ಅಧ್ಯಯನವನ್ನು ಮಾಡಲು ತೊಡಗಿದರು. ಅದಕ್ಕೆ ಪೂರಕವಾಗಿ ಒಂದು ಸಂಸ್ಥೆಯ ಸಹಕಾರದಿಂದ ಉತ್ತರ ಕರ್ನಾಟಕದ ಎಲ್ಲಾ 15 ಜಿಲ್ಲೆಗಳಲ್ಲಿ ಬಿಟ್ಟಿ ಚಾಕ್ರಿಯ ಅಸ್ತಿತ್ವವನ್ನು ಕಂಡುಹಿಡಿಯಲು ಒಂದು ದಾನಿ ಸಂಸ್ಥೆಯ ನೆರವಿನಿಂದ ಬೃಹತ್ ಸಮೀಕ್ಷೆಯನ್ನು ಜೀವಿಕವು 2018ರಲ್ಲಿ ಎತ್ತಿಕೊಂಡಿತು. ದಲಿತ ಮತ್ತು ಸಾಧ್ಯವಾದಷ್ಟೂ ಬಿಟ್ಟಿ ಚಾಕ್ರಿ ಕುಟುಂಬದಿಂದಲೇ ಬಂದಿರುವ ಶಿಕ್ಷಿತ ಯುವಕರನ್ನು ಒಂದೊಂದು ಜಿಲ್ಲೆಗೆ ಒಬ್ಬರಂತೆ ಆರಿಸಿ ಅವರಿಗೆ 2018ರ ಮಾರ್ಚ್ ತಿಂಗಳಲ್ಲಿ ತರಬೇತಿ ನೀಡಿ ಸಮೀಕ್ಷೆ ಕಾರ್ಯವನ್ನು ಆರಂಭಿಸಲಾಯಿತು. ಆದರೆ ನಿಗದಿತ ವೇಳೆಗೆ ಸಮೀಕ್ಷೆ ಕಾರ್ಯ ಮುಗಿಯದಿದ್ದರಿಂದ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳ ತನಕ ಇಡಿ ಕರ್ನಾಟಕದ ಜೀವಿಕ ಬಳಗವೇ ಸಮೀಕ್ಷೆಯಲ್ಲಿ ಭಾಗವಹಿಸಿ ಸಮೀಕ್ಷೆಯು ಯಶಸ್ವಿಯಾಗಿ ಪೂರ್ಣಗೊಳ್ಳುವಂತೆ ನೋಡಿಕೊಂಡಿತು. ಆ ಸಮೀಕ್ಷೆ ಮತ್ತು ಅಧ್ಯಯನಗಳ ಫಲವೇ ಬಿಟ್ಟಿ ಚಾಕ್ರಿ ಕುರಿತ ಈ ಸಾರಾಂಶ ರೂಪದ ವರದಿ. ವಿಸ್ತೃತವಾದ ವರದಿಯನ್ನು ಪ್ರತ್ಯೇಕವಾಗಿ ಹೊರತರಲಾಗುವುದು.

ಇದರಲ್ಲಿ ಅನಾವರಣ ಮಾಡಲಾದ ಉತ್ತರ ಕರ್ನಾಟಕದ ದಲಿತರ ಬದುಕಿನ ಒಂದು ಕರಾಳ ಮುಖವನ್ನು ಪರಿಚಯಿಸಿ ಅದಕ್ಕೆ ಸೂಕ್ತವಾದ ಚಿಕಿತ್ಸೆ ಸಂಬಂಧಪಟ್ಟವರಿಂದ ಸಿಗುವಂತಾಗಬೇಕೆಂಬುದೇ ಈ ವರದಿಯ ಪ್ರಮುಖ ಆಶಯ.

ಕಿರಣ ಕಮಲ ಪ್ರಸಾದ
ಬೆಂಗಳೂರು
ಫೆಬ್ರವರಿ 14, 2019

ಬಿಟ್ಟಿ ಚಾಕ್ರಿಯ ಸ್ವರೂಪ

1. ದಿನ ನಿತ್ಯದ ಬಿಟ್ಟಿ ಚಾಕ್ರಿ:

ಸೆಗಣಿ ಬಳಿಯುವುದು, ಹೆಂಡಿ ಕಸ ಬಳಿಯುವುದು, ಹೆಂಡಿ ಕಸ ಎತ್ತುವುದು ಮುಂತಾದ ಪರ್ಯಾಯ ಪದಗಳಿಂದ ಕರೆಯಲಾಗಿರುವ ಬಿಟ್ಟಿ ಚಾಕ್ರಿ ಪದ್ಧತಿಯು ಉತ್ತರ ಕರ್ನಾಟಕದ ಎಲ್ಲಾ 15 ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿದೆ. ದಿನ ನಿತ್ಯ ಬಿಟ್ಟಿ ಚಾಕ್ರಿ ಮಾಡುವ ದಲಿತರು ಬೆಳಿಗ್ಗೆ ಎದ್ದ ಕೂಡಲೇ ಸಂಪ್ರದಾಯದಂತೆ ನಿಗದಿಯಾದ ರೈತರ ಮನೆಗಳಿಗೆ ಬಿಟ್ಟಿ ಚಾಕ್ರಿ ಮಾಡಲು ಹೋಗಬೇಕು. ಸಾಮಾನ್ಯವಾಗಿ ಆ ಕೆಲಸಗಳು ಒಂದರಿಂದ ಎರಡು ಅಥವಾ ಮೂರು ಗಂಟೆಗಳ ಕಾಲ ಸಮಯ ತೆಗೆದುಕೊಳ್ಳಬಹುದು. ಬೆಳಿಗ್ಗೆ 6–7 ಗಂಟೆಯಿಂದ 8–9 ಗಂಟೆ ತನಕವೂ ಅವು ನಡೆಯುತ್ತವೆ. ಕೆಲವರು ಸಂಜೆಯೂ ಬಿಟ್ಟಿ ಚಾಕ್ರಿ ಮಾಡುತ್ತಾರೆ. ಅಲ್ಲಲ್ಲಿ ದಿನವಿಡೀ ಬಿಟ್ಟಿ ಚಾಕ್ರಿ ಮಾಡುವವರೂ ಕಾಣಸಿಗುತ್ತಾರೆ.

ಅವರು ಮಾಡುವ ಕೆಲಸಗಳು ಮುಖ್ಯವಾಗಿ ಮನೆ ಅಂಗಳ, ಕೊಟ್ಟಿಗೆಯ ಸ್ವಚ್ಛತೆಗೆ ಸಂಬಂಧಪಟ್ಟ ಎಲ್ಲಾ ಕೆಲಸಗಳು ಮತ್ತು ಕೆಲವು ಅಡಿಗೆಗೆ ಸಂಬಂಧಪಟ್ಟದ್ದಾಗಿವೆ. ಕೊಟ್ಟಿಗೆಗೆ ಸಂಬಂಧಿಸಿದಂತೆ ಸೆಗಣಿಯನ್ನು ಎತ್ತಿಹಾಕುವ ಮತ್ತು ಅದರ ಕುರಿತಾದ ಇನ್ನಿತರ ಹಲವಾರು ಕೆಲಸಗಳು, ದನಕರುಗಳನ್ನು ಸ್ವಚ್ಛ ಮತ್ತು ಆರೈಕೆ ಮಾಡುವ ಕೆಲಸಗಳು ಹಾಗೂ ಅಡಿಗೆಗೆ ಸಂಬಂಧಿಸಿದಂತೆ ಕಾಳುಕಡಿ ಹಸನು ಮಾಡುವುದು, ಕಟ್ಟಿಗೆ ಒಡೆಯುವುದು ಮುಂತಾದ ಕೆಲಸಗಳು ಒಳಗೊಂಡಿವೆ.

2. ವಿಶೇಷ ಸಂದರ್ಭ (ಮದುವೆ, ಸಾವು, ತಿಥಿ, ಹಬ್ಬ, ಜಾತ್ರೆ ಇತ್ಯಾದಿ) ಗಳಲ್ಲಿಯ ಬಿಟ್ಟಿ ಚಾಕ್ರಿ:

ದಿನನಿತ್ಯ ಬೆಳಿಗ್ಗೆ ಒಂದೆರಡು ಗಂಟೆ ಮಾಡುವ ಕೆಲಸಗಳ ಜೊತೆಗೆ ಕೆಲವು ವಿಶೇಷ ಸಂದರ್ಭಗಳಲ್ಲಿಯೂ ಬೇರೆ ಬೇರೆ ನಿಕೃಷ್ಟ ಸೇವೆಗಳನ್ನು ಸಲ್ಲಿಸಬೇಕಾಗುತ್ತದೆ. **ನಿಶ್ಚಿತಾರ್ಥ, ಮದುವೆ ಸಮಯದಲ್ಲಿ** ಬಿಟ್ಟಿ ಚಾಕ್ರಿಯ ಕೆಲಸವೆಂದರೆ ದಿನ ನಿತ್ಯ ಮಾಡುವ ಸ್ವಚ್ಛತೆ ಕೆಲಸಗಳ ಜೊತೆಗೆ ಇಡೀ ವಠಾರವನ್ನು ಶುಚಿಗೊಳಿಸುವುದು ಮತ್ತು ಸಿಂಗರಿಸುವುದು, ಮತ್ತು ಅಡಿಗೆಗೆ ಸಂಬಂಧಪಟ್ಟಂತೆ ಹಲವಾರು ಕೆಲಸಗಳನ್ನು ಒಳಗೊಂಡಿರುತ್ತದೆ. ದೇವರ ಕಾರ್ಯದ ಸಮಯದಲ್ಲಿ ಹಲಿಗೆ ಬಡಿಯುವುದು ಮತ್ತು ಮದುಮಗನಿಗೆ ಹೊಸ ಚಪ್ಪಲಿ ತರುವುದು ಅಥವಾ ಸ್ವತಃ ಹೊಲಿದು ಕೊಡುವುದು, ಮದುವೆ ಸಮಯದಲ್ಲಿ ಮಾಡಬೇಕಾದ ವಿಶಿಷ್ಟ ಕೆಲಸಗಳಾಗಿವೆ. ಔತಣದ ಸಮಯದಲ್ಲಿ ಪಾತ್ರೆಗಳನ್ನು ತೊಳೆಯುವುದು, ಊಟದ ಎಲೆಗಳನ್ನು ತೆಗೆದುಹಾಕುವುದು ಕೂಡಾ ಮಾಡಬೇಕಾಗುತ್ತದೆ. ಮದುವೆಯ ಎಂಟು ದಿವಸ ಮೊದಲು ಮತ್ತು ನಂತರ ಎಂಟು ದಿವಸ ದನಕರುಗಳಿಗೆ ನೀರು ಕುಡಿಸುವುದು, ಮೇವು ಹಾಕುವುದು, ಮೈ ತೊಳೆಯುವುದು ಮುಂತಾದ ಕೆಲಸಗಳನ್ನು ಮಾಡಲೇಬೇಕು. ಮದುವೆ ಸಮಯದಲ್ಲಿ 8–10 ದಿನ ಕೆಲಸವಿರುತ್ತೆ.

ಸಾವಿನ ಸಂದರ್ಭದಲ್ಲಿ ಬಿಟ್ಟಿ ಚಾಕ್ರಿಯಲ್ಲಿ ಸ್ವಚ್ಛತೆಯ ಕೆಲಸಗಳು ಎಂದಿನಂತಿರುತ್ತವೆ. ಜೊತೆಗೆ ಹಲಿಗೆ ಬಡಿಯುವುದು, ಹಿಲಾಲ್ (ಪಂಜು) ಹಿಡಿಯುವುದು, ದಾನದ ಬುಟ್ಟಿ ಹೊರುವುದು, ಶವ ಎತ್ತಿ ಕೊಂಡು ಹೋದ ಮೇಲೆ ಶವ ಇಟ್ಟ ಜಾಗವನ್ನು ತೊಳೆದು ಸಗಣಿಯಿಂದ ಸಾರಿಸಿ, ಬಿದ್ದಿರುವ ಕಸಕಡ್ಡಿ, ಹೂಎಲೆ ಮುಂತಾದುವುಗಳನ್ನು ಗುಡಿಸಿ ಸುಟ್ಟು ಹಾಕುವುದು, ಹಕ್ಕೆ (ಕೊಟ್ಟಿಗೆ), ಹುಸಿ (ಮನೆ ಓಳಗೆ ಹೋಗುವ ದಾರಿ), ಅಂಗಳ ಬಾಗಿಲನ್ನು ತೊಳೆದು ಶುಚಿಗೊಳಿಸುವುದು. ಸಿದಗಿ (ಶವ ಕೊಂಡೊಯ್ಯಲಿಕ್ಕೆ ಬಳಸುವ ಮರದ ಅಥವಾ ಕಬ್ಬಿಣದ ಒಂದು ಸಾಧನ) ಹೊರುವುದು ಅಂದರೆ ಶವ ಸಂಸ್ಕಾರ ಆದ ಮೇಲೆ ಊರ ಮಠದಲ್ಲಿ ಇಡುವುದು, ಇತ್ಯಾದಿ ಕೆಲವು ವಿಶಿಷ್ಟ ಸೇವೆಗಳು ಸೇರಿವೆ. ನಂತರ ಎಂಟರಿಂದ 15 ದಿನಗಳ ತನಕ ಸಾಂತ್ವನ ನೀಡಲು ಬಂದವರಿಗೆ ಸತ್ಕಾರ ನೀಡಿದ ಮೇಲೆ ತಿಂಡಿ ತಿನಿಸು ಮಾಡಿದ ಎಲೆ, ಟೀ ಕಪ್ಪುಗಳನ್ನು ಎತ್ತಿ ಹಾಕಲು ಒಬ್ಬರು ಇಡೀ ದಿವಸ ಇರಲೇ ಬೇಕು. ಅವರು ಆ ದಿನಗಳಂದು ಬೇರೆ ದಿನಗೂಲಿಗೆ ಹೋಗುವ ಹಾಗಿಲ್ಲ.

ತಿಥಿ ಸಂರ್ಭದಲ್ಲಿ ಬಿಟ್ಟಿ ಚಾಕ್ರಿಯಲ್ಲಿ ಅಂಗಳ ಕಸ ಗುಡಿಸುವುದು, ಮನೆ ಸಾರಿಸುವುದು, ಕಸ ತೆಗೆಯುವುದು, ಕಟ್ಟಿಗೆ ಒಡೆಯುವುದು, ಮೇವು ಕೊರೆಯುವುದು, ಊಟದ ಎಲೆಗಳನ್ನು ತೆಗೆದುಹಾಕುವುದು, ಹಲಿಗೆ ಬಡಿಯುವುದು, ಹಸು ಸ್ವಚ್ಛಗೊಳಿಸುವುದು, ತಿಂದು ಬಿಟ್ಟಿದ್ದನ್ನು ನೀಡಿಸಿಕೊಂಡು ಬರುವುದು, ಇತ್ಯಾದಿ ಕೆಲಸಗಳಿವೆ. ಇವೆಲ್ಲಾ ಒಂದೇ ದಿವಸಕ್ಕೆ ಆಗುವ ಕೆಲಸಗಳು. ಮದುವೆ, ತಿಥಿ, ಸಾವುಗಳಲ್ಲಿ ಮೂರೂ ಹೊತ್ತೂ ಸಗಣಿ ಬಳಿಯಬೇಕು.

ಹಸು ಎಮ್ಮೆ ಸತ್ತಾಗ ಎತ್ತಿ ನಿರ್ದಿಷ್ಟ ಜಾಗದಲ್ಲಿ ಹಾಕಿ ಚರ್ಮ ಬಿಡಿಸುವುದು ಕೂಡಾ ಸಂಪ್ರದಾಯದ ಸೇವೆಯ ಭಾಗವಾಗಿ ಕೆಲವು ಹಳ್ಳಿಗಳಲ್ಲಿದೆ. ಹೆಚ್ಚು ಕಡಿಮೆ ಎಲ್ಲಾ ಊರುಗಳಲ್ಲಿಯೂ ಅದು ಇನ್ನೂ ಚಾಲ್ತಿಯಲ್ಲಿದೆ.

ಹೆಣ್ಣು ಮಕ್ಕಳು ಮೈ ನೆರೆದಾಗ ಕಟ್ಟಿಗೆ ಕಡಿಯುವುದು, ಹಲಿಗೆ ಬಡಿಯುವುದು, ಸಂಬಂಧಿಕರು ಬುತ್ತಿ ಕಟ್ಟಿ ಕೊಂಡು ಬಂದಾಗ ಊಟದ ಎಲೆ, ಟೀ ಕಪ್ಪು ಎತ್ತುವುದು, ಕಸ ಮುಸೂರಿ ಸ್ವಚ್ಛ ಮಾಡುವುದು, ಹಾಡುಗಾರರಿದ್ದರೆ ಶೋಬಾನೆ ಹಾಡುಗಳನ್ನು ಹಾಡುವುದು ಮುಂತಾದ ಕೆಲಸಗಳು ಬಿಟ್ಟಿ ಚಾಕ್ರಿಯಲ್ಲಿ ಸೇರುತ್ತವೆ. ಮೈ ನೆರೆದ ಹೆಣ್ಣು ಮಕ್ಕಳು ನಿದ್ದೆಗೆ ಜಾರದ ಹಾಗೆ ಬಿಟ್ಟಿ ಚಾಕ್ರಿ ಮಾಡುವ ದಲಿತ ಹೆಂಗಸರು ಎರಡು ದಿನ ಅವರ ಜೊತೆಗಿದ್ದು ತಾವೂ ನಿದ್ರೆಗೆಡಬೇಕಾಗುತ್ತದೆ.

ಊರ ಹಬ್ಬ, ಜಾತ್ರೆ ಸಮಯದಲ್ಲಿ ಬಿಟ್ಟಿ ಚಾಕ್ರಿಯ ಕೆಲಸಗಳೆಂದರೆ ಹಸುಗಳ ಮೈ ತೊಳೆಯುವುದು, ಕಟ್ಟಿಗೆ ಒಡೆಯುವುದು, ನೆಲ ಸ್ವಚ್ಛಗೊಳಿಸುವುದು, ಅಂಗಳ ಕಸ ಗುಡಿಸುವುದು, ಕಟ್ಟಿಗೆ ಬಡಿಯುವುದು, ಮಟ್ಟಿ (ಮಣ್ಣು) ತಂದು ಕೊಟ್ಟಿಗೆಗೆ ಸುಣ್ಣ ಬಳಿಯುವುದು (ದಸರಾ/ಹಟ್ಟಿ ಹಬ್ಬಕ್ಕೆ), ಅಡಿ (ತಿಪ್ಪೆಗುಂಡಿ) ತಿರುವಿ ಹಾಕುವುದು (ದೀಪಾವಳಿ, ಉಗಾದಿಗೆ), ಬಾರುಕೋಲುಮಾಡಿ ಕೊಡುವುದು (ನಾಗರ ಪಂಚಮಿಯಲ್ಲಿ), ಇತ್ಯಾದಿ.

3. ಬಿಟ್ಟಿ ಚಾಕ್ರಿ ಮಾಡುವವರಿಗೆ ಸಿಗುವ ಸೌಲಭ್ಯಗಳು

ದಿನ ನಿತ್ಯ ಬಿಟ್ಟಿ ಚಾಕ್ರಿ ಮಾಡುವವರಿಗೆ ಟೀ, ಒಂದೆರಡು ತಂಗಳ ರೊಟ್ಟಿ ಕೊಡುತ್ತಾರೆ. ಟೀಯನ್ನು ಅಲ್ಲೇ ಕುಡಿದು ರೊಟ್ಟಿಗಳನ್ನು ಮನೆಗೆ ತೆಗೆದುಕೊಂಡು ಮಕ್ಕಳಿಗೆ ಕೊಡುವುದು ರೂಢಿ. ಇದರ ಜೊತೆಗೆ ವರ್ಷಕ್ಕೆ ಒಂದು ದನಕ್ಕೆ ಒಂದು ಚೀಲ (100 ಕಿ.ಗ್ರಾಂ.)ದಂತೆ ಜೋಳವನ್ನು ರೈತರು ಬಿಟ್ಟಿ ಚಾಕ್ರಿ ಮಾಡುವವರಿಗೆ ಕೊಡುತ್ತಾರೆ. ಜೋಳದ ಜೊತೆ ಹೊಲ ಗದ್ದೆಗಳಲ್ಲಿ ಬೆಳೆದ ಬೇರೆ ಬೇರೆ ದವಸ ಧಾನ್ಯಗಳಲ್ಲಿ (ಗೋದಿ, ಶೇಂಗಾ, ಬೇಳೆ, ಬೆಲ್ಲ, ಹೆಸರು ಇತ್ಯಾದಿ) 2ರಿಂದ 10 ಕಿಲೊ ಗ್ರಾಂ ತನಕ ಕೊಡುತ್ತಾರೆ. ಬೀದರ್ ಜಿಲ್ಲೆಯಲ್ಲಿ ಮಾತ್ರ ದವಸಧಾನ್ಯಗಳ ಬದಲು ಒಂದೆರಡು ಸಾವಿರ ರೂಪಾಯಿಗಳನ್ನು ವರ್ಷಕ್ಕೆ ಕೊಡುತ್ತಾರೆ. ಏನಿದ್ದರೂ ವರ್ಷವಿಡೀ ಪ್ರತಿನಿತ್ಯ ತಪ್ಪದೇ 2–3 ಗಂಟೆ ಮಾಡುವ ಕೆಲಸಕ್ಕೆ ಅವರಿಗೆ ಒಂದು ವರ್ಷಕ್ಕೆ ಸಿಗುವ ಕಾಳುಕಡಿ ಅಥವಾ ಹಣ ನ್ಯಾಯೋಚಿತವಾಗಿರುವುದಿಲ್ಲ. ಕರ್ನಾಟಕ ಸರ್ಕಾರದ ಕನಿಷ್ಟ ವೇತನದ ಪ್ರಕಾರ ಅತ್ಯಂತ ಕೆಳಮಟ್ಟದ ಶ್ರಮಾಧಾರಿತ ಕೆಲಸಕ್ಕೆ ದಿನಕ್ಕೆ 324 ರೂ. ನಿಗದಿಯಾಗಿದೆ. ಪ್ರಚಲಿತ ಕೂಲಿ ಉತ್ತರ ಕರ್ನಾಟಕದ ಹೆಚ್ಚಿನ ಊರುಗಳಲ್ಲಿ ಗಂಡಸರಿಗೆ 200 ರೂ., ಹೆಂಗಸರಿಗೆ 100ರಿಂದ 150 ರೂ. ಪ್ರಚಲಿತ ಕೂಲಿಯಲ್ಲೇ 10 ದಿನಗಳ ಕಾಲ ಕೆಲಸ ಮಾಡಿದರೆ ಒಂದು ಚೀಲ ಉತ್ತಮ ಬಿಳಿಜೋಳ ಸಂಪಾದಿಸಬಹುದು. ಕೇವಲ ಎರಡೇ ಗಂಟೆ ಬಿಟ್ಟಿ ಚಾಕ್ರಿ ಮಾಡಿದರೂ 40 ದಿನ ಅಥವಾ ಒಂದುವರೆ ತಿಂಗಳೊಳಗೆ ಅದನ್ನು ಸಂಪಾದಿಸಬಹುದು. ಆದುದರಿಂದ ದಿನನಿತ್ಯ ಬಿಟ್ಟಿ ಚಾಕ್ರಿ ಮಾಡುವವರಿಗೆ ದವಸ ಧಾನ್ಯದಲ್ಲಿ ಸಿಗುವ ಪ್ರತಿಫಲ ಅವರು ಹಾಕುವ ಶ್ರಮಕ್ಕೆ ಸರಿಸಮಾನವಾಗಿರುವುದಿಲ್ಲ. ಜೊತೆಗೆ ದಿನನಿತ್ಯ ಸೇವೆಗಳ ಜೊತೆ ಬೇರೆ ಬೇರೆ ವಿಶೇಷ ಸಂದರ್ಭಗಳಲ್ಲಿ ದಿನವಿಡೀ, ಕೆಲವು ಸಾರಿ ಹಲವಾರು ದಿನ ಪರ್ಯಂತ, ಕೂಲಿ ಇಲ್ಲದೇ ಬಿಟ್ಟಿ ಚಾಕ್ರಿಯ ಸೇವೆ ಸಲ್ಲಿಸ ಬೇಕಾಗುತ್ತದೆ.

ಎಲ್ಲಾ ವಿಶೇಷ ಸಂದರ್ಭಗಳಲ್ಲಿ ಬಿಟ್ಟಿ ಚಾಕ್ರಿ ಮಾಡುವ ವ್ಯಕ್ತಿಗಳಿಂದ ಹಿಡಿದು ಅವರ ಕುಟುಂಬದ ಎಲ್ಲರಿಗೂ ಊಟವಂತೂ ಸಿಗುತ್ತದೆ. ಜೊತೆಗೆ ಒಂದು ಬಟ್ಟೆ, ಹಳೆ ಪಾತ್ರೆಗಳು, 200–300 ರೂ.ಗಳನ್ನು ಕೊಡಲಾಗುತ್ತದೆ. ಕೆಲವು ಮಂದಿ ಬಿಟ್ಟಿ ಚಾಕ್ರಿ ಮಾಡಿಸುವವರು ಒಂದು ಎಮ್ಮೆ ಕರು ಅಥವಾ ಐದು ಗ್ರಾಂ ಬಂಗಾರದಂತಹ ದೊಡ್ಡ ಮಟ್ಟದ ಕೊಡುಗೆ ಕೊಟ್ಟಿರುವುದನ್ನು ದಲಿತರು ಸ್ಮರಿಸುತ್ತಾರೆ. ಸಾವಿನ ಸಂದರ್ಭದಲ್ಲಿ ದಾನದ ಬುಟ್ಟಿ ಹೊರುವವರಿಗೆ ಆ ಬುಟ್ಟಿಯಲ್ಲಿದ್ದ ದಾನದ ಕಾಳುಗಳು ಮತ್ತು ಹಳೆ ಪಾತ್ರೆಗಳನ್ನು ಕೊಡುತ್ತಾರೆ. ಕೆಲವರು 200–300 ಅಥವಾ 400–500 ರೂ.ಗಳನ್ನೂ ಪಡೆದಿದ್ದಾರೆ. ತಿಥಿಯ ಸಮಯದಲ್ಲಿ ಆ ದಿನದ ಊಟ ಬಿಟ್ಟರೆ ಬೇರೆ ಏನೂ ಸಿಗುವುದಿಲ್ಲ. ಕೆಲವು ಸಾರಿ ಹಲಿಗೆ ಬಡಿಯಲಿಕ್ಕೆ 200 ರೂ.ಗಳನ್ನು ಪಡೆದಿರುವುದೂ ಉಂಟು.

ಉತ್ತರ ಕರ್ನಾಟಕದ 15 ಜಿಲ್ಲೆಗಳಲ್ಲಿ ಬಿಟ್ಟಿ ಚಾಕ್ರಿ ಕುರಿತು 2018ರಲ್ಲಿ ಮಾಡಿದ ಸಮೀಕ್ಷೆಯಿಂದ ಕಂಡು ಬಂದ ಸಂಗತಿಗಳು

1. ಬಿಟ್ಟಿ ಚಾಕ್ರಿ ಮಾಡುವವರ ಒಟ್ಟಾರೆ ಅಂಕಿಅಂಶಗಳು:

15 ಜಿಲ್ಲೆಗಳ ಒಟ್ಟು 964 ಹಳ್ಳಿಗಳಲ್ಲಿ 3387 ಬಿಟ್ಟಿ ಚಾಕ್ರಿ ಮಾಡುವ ಕುಟುಂಬಗಳನ್ನು ಗುರುತಿಸಲಾಗಿದೆ. ಇಡೀ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಸಮೀಕ್ಷೆ ಕೈಗೊಳ್ಳುವ ಮುಂಚೆ ಸುಮಾರು 15,000 ದಲಿತ ಕುಟುಂಬಗಳು ಇಂತಹ ಪದ್ಧತಿಯಲ್ಲಿ ಸಿಲುಕಿದ್ದುವು ಎಂದು ಅಂದಾಜಿಸಲಾಗಿತ್ತು. ಹಲವಾರು ಕಾರಣಗಳಿಂದ ಬಿಟ್ಟಿ ಚಾಕ್ರಿ ಮಾಡುವ ಎಲ್ಲಾ ದಲಿತ ಕುಟುಂಬಗಳನ್ನು ಸಮೀಕ್ಷೆಯಿಂದ ಗುರುತಿಸಲಿಕ್ಕೆ ಆಗದೇ ಇರುವ ಸಾಧ್ಯತೆಗಳು ಹೆಚ್ಚಿಗಿವೆ. ಸಮೀಕ್ಷೆದಾರರ ಒಂದು ಅಂದಾಜಿನ ಪ್ರಕಾರ ಸುಮಾರು 1,000 ದಷ್ಟು ದಿನನಿತ್ಯ ಬಿಟ್ಟಿಚಾಕರಿ ಮಾಡುವ ಕುಟುಂಬಗಳು ಸಮೀಕ್ಷೆಯಿಂದ ಬಿಟ್ಟುಹೋಗಿರಬಹುದು. ಅದೇ ರೀತಿ ಸಮೀಕ್ಷೆದಾರರು ದಿನನಿತ್ಯ ಬಿಟ್ಟಿಚಾಕ್ರಿ ಮಾಡುವ ಕುಟುಂಬಗಳ ವಿವರ ಪಡೆಯುವಾಗ ಅವರ ಗಮನಕ್ಕೆ 11,000 ಕ್ಕಿಂತಲೂ ಹೆಚ್ಚಿನ ಕುಟುಂಬಗಳು ವಿಶೇಷ ಸಂದರ್ಭಗಳಲ್ಲಿ ಮಾತ್ರ ಈಗಲೂ ಬಿಟ್ಟಿಚಾಕ್ರಿ ಮಾಡುವುದು ಕಂಡುಬಂದಿದೆ. ಅವರ ಸಂಖ್ಯೆ ಇನ್ನೂ ಜಾಸ್ತಿ ಇರಬಹುದು. ಅಂತಹ ಕುಟುಂಬಗಳು ದಕ್ಷಿಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿಯೂ ಕಾಣಸಿಗುತ್ತಾರೆ.

ಬಿಟ್ಟಿ ಚಾಕ್ರಿ ಮಾಡುವವರ ಸಂಖ್ಯೆಯ ಪ್ರತಿಲೋಮ ಕ್ರಮದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಬಿಟ್ಟಿ ಚಾಕ್ರಿ ಮಾಡುವವರು ಇರುವ ಜಿಲ್ಲೆಯು ಬೀದರ್ ಆಗಿದೆ (682 ಮಂದಿ) ಮತ್ತು ಅತಿ ಕಡಿಮೆ ಇರುವ ಜಿಲ್ಲೆ ದಾವಣಗೆರೆ ಆಗಿದೆ (39 ಮಂದಿ). ಇವುಗಳ ಮಧ್ಯೆ ಇರುವ ಜಿಲ್ಲೆಗಳು ಹೀಗಿವೆ: ಬೆಳಗಾವಿ – 424, ಹಾವೇರಿ – 409, ಬಾಗಲಕೋಟೆ – 388, ಧಾರವಾಡ – 314, ಗದಗ – 241, ಚಿತ್ರದುರ್ಗ – 164, ಕಲಬುರಗಿ – 155, ರಾಯಚೂರು –117, ಕೊಪ್ಪಳ – 117, ಬಳ್ಳಾರಿ – 105, ಯಾದಗಿರಿ – 80, ಸಿರ್ಸಿ 55, ಚಿಕ್ಕೋಡಿ –52 ಮತ್ತು ಬಿಜಾಪುರ –45.

ಅತ್ಯಧಿಕ ಅಂದರೆ ಸುಮಾರು ಮುಕ್ಕಾಲು ಪ್ರಮಾಣದಷ್ಟು ಬಿಟ್ಟಿ ಚಾಕ್ರಿ ಮಾಡುವವರು (72.7%) ಕೇವಲ ಆರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ: ಬೀದರ್ (682), ಬಾಗಲಕೋಟೆ (388), ಬೆಳಗಾವಿ (424), ಗದಗ (241), ಧಾರವಾಡ (314) ಮತ್ತು ಹಾವೇರಿ (409). ಬೀದರ್ ಒಂದು ಜಿಲ್ಲೆ ಬಿಟ್ಟರೆ ಇವು ಪ್ರಮುಖವಾಗಿ **ಮುಂಬೈ ಕರ್ನಾಟಕ ಪ್ರದೇಶದವು.**

ಕಾಲು ಪ್ರಮಾಣಕ್ಕಿಂತ ಸ್ವಲ ಕಡಿಮೆ ಪ್ರಮಾಣದಲ್ಲಿ ಆರು ಜಿಲ್ಲೆಗಳಿವೆ: ಚಿತ್ರದುರ್ಗ (164), ಕಲಬುರಗಿ (155), ಯಾದಗಿರಿ (80), ರಾಯಚೂರು (117), ಕೊಪ್ಪಳ (117), ಬಳ್ಳಾರಿ 105). ಇವುಗಳಲ್ಲಿ ಚಿತ್ರದುರ್ಗ ಬಿಟ್ಟರೆ ಉಳಿದ ಐದು ಜಿಲ್ಲೆಗಳು **ಹೈದರಬಾದ್ ಕರ್ನಾಟಕ ಪ್ರದೇಶಕ್ಕೆ** ಸೇರಿದವು. ಚಿತ್ರದುರ್ಗ **ಹಳೆ ಮೈಸೂರು ಪ್ರದೇಶಕ್ಕೆ**

ಸೇರಿರುತ್ತದೆ. ಅವುಗಳ ಒಟ್ಟು ಪ್ರಮಾಣ 21.8%.

ಉಳಿದ ನಾಲ್ಕು ಜಿಲ್ಲೆ ಅಥವಾ ಉಪವಿಭಾಗಗಳಲ್ಲಿ ಅಂದರೆ ಸಿರ್ಸಿ ಉಪವಿಭಾಗ (55), ಚಿಕ್ಕೋಡಿ ಉಪವಿಭಾಗ (52), ಬಿಜಾಪುರ (45) ಮತ್ತು ದಾವಣಗೆರೆ (39) ಜಿಲ್ಲೆಗಳಲ್ಲಿ **ದಾವಣಗೆರೆಯು ಹಳೆ ಮೈಸೂರು ಪ್ರದೇಶಕ್ಕೆ ಸೇರಿದರೆ ಉಳಿದವು ಮುಂಬೈ ಕರ್ನಾಟಕಕ್ಕೆ** ಸೇರಿದವು. ಅವುಗಳಲ್ಲಿ ಬಿಟ್ಟಿ ಚಾಕ್ರಿ ಮಾಡುವವರ ಪ್ರಮಾಣ ಕೇವಲ 5.5%.

ಹೀಗೆ ಪ್ರಮುಖವಾಗಿ ಬಿಟ್ಟಿ ಚಾಕ್ರಿಯು ಮುಂಬೈ ಕರ್ನಾಟಕದಲ್ಲಿ ಕಂಡುಬರುತ್ತದೆ. ಹೈದರಬಾದ್ ಕರ್ನಾಟಕದ ತುತ್ತ ತುದಿಯಲ್ಲಿರುವ ಕೇವಲ ಒಂದು ಜಿಲ್ಲೆಯಾದ ಬೀದರ್‌ನಲ್ಲಿ ಮಾತ್ರ ಅತಿ ದೊಡ್ಡ ಸಂಖ್ಯೆಯಲ್ಲಿ ಅದು ಕಂಡುಬರುತ್ತದೆ ಮತ್ತು ಅಲ್ಲಿರುವ ಬಿಟ್ಟಿ ಚಾಕ್ರಿಯ ಪ್ರಮಾಣ ಎಲ್ಲಾ ಜಿಲ್ಲೆಗಳಿಗಿಂತ ಹೆಚ್ಚು. ಹೈದರಬಾದ್ ಪ್ರದೇಶದ ಎಲ್ಲಾ ಜಿಲ್ಲಗಳಲ್ಲಿಯೂ ಬಿಟ್ಟಿ ಚಾಕ್ರಿಯು ಕಂಡು ಬರುತ್ತದೆ. ಆದರೆ ಅಲ್ಲಿರುವ ಬಿಟ್ಟಿ ಚಾಕ್ರಿ ಮಾಡುವವರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿಯೇ ಇದೆ. ಹಳೆ ಮೈಸೂರು ಪ್ರದೇಶದ ಕೇವಲ ಎರಡು ಜಿಲ್ಲೆಗಳಲ್ಲಿ ಮಾತ್ರ ಕ್ರಮವಾಗಿ ಕಡಿಮೆ ಮತ್ತು ಅತ್ಯಲ್ಪ ಪ್ರಮಾಣದಲ್ಲಿ ಬಿಟ್ಟಿ ಚಾಕ್ರಿಯು ಕಂಡುಬರುತ್ತದೆ. ವಿಭಿನ್ನ ಚಾರಿತ್ರಿಕ ಹಿನ್ನೆಲೆಯ ಮೂರೂ ಪ್ರದೇಶಗಳು ಒಳಗೊಂಡಿರುವ ಉತ್ತರ ಕರ್ನಾಟಕದ ಎಲ್ಲಾ 15 ಜಿಲ್ಲೆಗಳಲ್ಲಿ ಬಿಟ್ಟಿ ಚಾಕ್ರಿಯು ಕಂಡು ಬರುತ್ತಿದ್ದು, ವಿವಿಧ ಚಾರಿತ್ರಿಕ ಹಿನ್ನೆಲೆಗಳಿಂದ (ಹಳೆ ಮೈಸೂರು ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ, ಕೊಡಗು ಸಂಸ್ಥಾನ) ಕೂಡಿದ ದಕ್ಷಿಣ ಕರ್ನಾಟಕದಲ್ಲಿ ಬಿಟ್ಟಿ ಚಾಕ್ರಿಯು ಈಗ ಕಾಣದೇ ಇರುವುದು ಆಧುನಿಕ ಕರ್ನಾಟಕದಲ್ಲಿ 'ಆಧುನಿಕ ಅಭಿವೃದ್ಧಿ'ಯು ದಕ್ಷಿಣ ಕರ್ನಾಟಕ ಅದರಲ್ಲೂ ಬೆಂಗಳೂರನ್ನು ಕೇಂದ್ರೀಕರಿಸಿರುವುದು ಬಿಟ್ಟಿ ಚಾಕ್ರಿಯ ಅಸ್ತಿತ್ವದ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಬಹುದು. ಇಲ್ಲಿಯ ಜಿಲ್ಲೆಗಳಲ್ಲಿಯೂ 15–20 ವರ್ಷಗಳ ಹಿಂದೆ ಬಿಟ್ಟಿ ಚಾಕ್ರಿಯು ಅಸ್ತಿತ್ವದಲ್ಲಿತ್ತು ಎಂದು ಕೇಳಿಬರುತ್ತಿದೆ. ಇದನ್ನು ಆಳವಾಗಿ ಅಭ್ಯಸಿಸುವ ಅಗತ್ಯವಿದೆ.

2. ಬಿಟ್ಟಿ ಚಾಕ್ರಿ ಮಾಡುವವರ ಲಿಂಗವಾರು ಶಿಕ್ಷಣ, ವಯಸ್ಸು, ಇತರ ಕೆಲಸಗಳ ವಿವರಗಳು

ಬಿಟ್ಟಿ ಚಾಕ್ರಿ ಮಾಡುವವರ ಲಿಂಗವಾರು ವಿಂಗಡನೆ:

ಒಟ್ಟಾರೆಯಾಗಿ ಬಿಟ್ಟಿ ಚಾಕ್ರಿ ಮಾಡುವವರಲ್ಲಿ ಗಂಡಸರ ಸಂಖ್ಯೆಯೇ ಸ್ವಲ್ಪ ಜಾಸ್ತಿ. ಆದರೆ ಐದು ಜಿಲ್ಲೆಗಳಲ್ಲಿ ಮಾತ್ರ ಹೆಂಗಸರ ಸಂಖ್ಯೆ ಗಂಡಸರಿಗಿಂತ ಗಣನೀಯವಾಗಿ ಜಾಸ್ತಿ ಇದೆ. ಅವು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಬೆಳಗಾವಿ. ಅವುಗಳಲ್ಲಿ ಬೆಳಗಾವಿ ಮಾತ್ರ ಮುಂಬೈ ಕರ್ನಾಟಕಕ್ಕೆ ಸೇರಿದರೆ. ಉಳಿದ ನಾಲ್ಕು ಜಿಲ್ಲೆಗಳು ಹೈದರಬಾದ್ ಕರ್ನಾಟಕಕ್ಕೆ ಸೇರಿದವು. ಮುಂಬೈ ಕರ್ನಾಟಕದ ಬೆಳಗಾವಿ ಒಂದು ಜಿಲ್ಲೆ ಬಿಟ್ಟರೆ ಅದರ ಸುತ್ತಮುತ್ತಲಿನ ಎಲ್ಲಾ ಜಿಲ್ಲೆಗಳಲ್ಲಿ ಗಂಡಸರೇ ಜಾಸ್ತಿಯಾಗಿರುವ ಕಾರಣಗಳನ್ನೂ ಅರ್ಥೈಸಬೇಕಾಗುತ್ತದೆ. ಆದರೆ ಒಟ್ಟಾರೆ ಜಿಲ್ಲೆಯಲ್ಲಿ ಗಂಡಸರು ಹೆಂಗಸರ ಬಗೆಗಿನ ಚಿತ್ರ ಅದರಲ್ಲಿಯ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಕಾಣಸಿಗುತ್ತದೆ. ಕೇವಲ ಎರಡು ಜಿಲ್ಲೆಗಳಲ್ಲಿ ಆ ಚಿತ್ರ

ಏರುಪೇರಾಗಿದೆ. ಬೆಳಗಾವಿಯ ಬೈಲಹೊಂಗಲ ಒಂದು ತಾಲೂಕಿನಲ್ಲಿ ಗಂಡಸರೇ ಜಾಸ್ತಿ ಮತ್ತು ದಾವಣಗೆರೆಯ ಹೊನ್ನಾಳಿ ಮತ್ತು ದಾವಣಗೆರೆ ಎರಡು ತಾಲೂಕುಗಳಲ್ಲಿ ಹೆಂಗಸರೇ ಜಾಸ್ತಿ.

ಸಮಿಕ್ಷೆ ಕೈಗೊಳ್ಳುವ ಮುಂಚಿನ ಒಂದು ಅಭಿಪ್ರಾಯದ ಪ್ರಕಾರ ಒಟ್ಟಾರೆಯಾಗಿಯೂ ಜಿಲ್ಲೆ, ತಾಲೂಕು ಮತ್ತು ಹಳ್ಳಿಗಳಲ್ಲಿಯೂ ಮಹಿಳೆಯರೇ ದಿನನಿತ್ಯದ ಬಿಟ್ಟಿ ಚಾಕ್ರಿಯಲ್ಲಿ ತೊಡಗಿರುವವರೆಂದು ಅಭಿಪ್ರಾಯ ಪಡಲಾಗಿತ್ತು. ಈ ಸಮೀಕ್ಷೆಯ ಪ್ರಕಾರ ಕೆಲವು ಜಿಲ್ಲೆಗಳಲ್ಲಿ ಮಾತ್ರ ಬಿಟ್ಟಿ ಚಾಕ್ರಿಯಲ್ಲಿ ತೊಡಗಿರುವ ಗಂಡಸರು ಮತ್ತು ಹೆಂಗಸರ ಸಂಖ್ಯೆಯ ಬಗ್ಗೆ ತೀರ ವ್ಯತ್ಯಾಸವಿದ್ದು ಒಟ್ಟಾರೆಯಾಗಿ ಅವರ ಸಂಖ್ಯೆ ಸಮಸಮವಾಗಿದೆ.

ಬಿಟ್ಟಿ ಚಾಕ್ರಿ ಮಾಡುವವರ ವಯಸ್ಸು:

ವಯಸ್ಸಿನ ಪ್ರಕಾರ 26 ವರ್ಷ ಮೇಲ್ಪಟ್ಟವರೇ (97.9%) ಬಿಟ್ಟಿ ಚಾಕ್ರಿ ಮಾಡುವವರು ಎಂದು ತಿಳಿದುಕೊಳ್ಳಬಹುದು. ಅದರಲ್ಲಿಯೂ 26ರಿಂದ 50 ವರ್ಷದ ಒಳಗಿರುವವರು 61.5%. ಕಾಲು ಬಾಗದಷ್ಟು (23.8%) 51ರಿಂದ 60 ವರ್ಷದ ವರೆಗಿನವರಾಗಿದ್ದಾರೆ. ಒಂದನೇ ಎಂಟು ಭಾಗದಷ್ಟು (12.6%) 60 ವರ್ಷದ ಮೇಲಿನ ಹಿರಿಯರೂ ಬಿಟ್ಟಿ ಚಾಕ್ರಿಯನ್ನು ಮಾಡುತ್ತಾರೆ. ಆದರೆ 25 ವರ್ಷ ಕೆಳಗಿನ ವಯಸ್ಸಿನವರು ಅತ್ಯಲ್ಪ ಕಡಿಮೆ ಪ್ರಮಾಣದಲ್ಲಿದ್ದಾರೆ (2.1). ಅವರಲ್ಲಿ 19ರಿಂದ 25 ವರ್ಷದ ವರೆಗಿನವರು 66 ಮಂದಿ (1.85%), 15ರಿಂದ 18 ವರ್ಷದ ಹಿರಿಯ ಮಕ್ಕಳು ಕೇವಲ ನಾಲ್ಕು ಮಂದಿ (0.12%) ಮತ್ತು 13 ವರ್ಷದ ಬಾಲಕ ಒಬ್ಬ (0.03%).

ಬಿಟ್ಟಿ ಚಾಕ್ರಿ ಮಾಡುವವರ ಶೈಕ್ಷಣಿಕ ಮಟ್ಟ:

ಬಿಟ್ಟಿ ಚಾಕ್ರಿ ಮಾಡುವವರ ಶೈಕ್ಷಣಿಕ ಮಟ್ಟ ಅವರಲ್ಲಿಯ ದೊಡ್ಡ ಪ್ರಮಾಣದಲಿಯ ಅನಕ್ಷರತೆಯನ್ನು ತೋರಿಸಿ ಕೊಡುತ್ತದೆ. 3387 ಮಂದಿಯಲ್ಲಿ 2885 ಮಂದಿ (85.2%) ಅನಕ್ಷರಸ್ತರಾಗಿದ್ದಾರೆ. ಅಕ್ಷರಸ್ತರು ಕೇವಲ 500 ಮಂದಿ (14.8%). ಆಶ್ಚರ್ಯವೆಂದರೆ ಅವರಲ್ಲಿ ಪಿಯುಸಿ ಮಾಡಿದವರು 30 ಮಂದಿ ಮತ್ತು ಡಿಗ್ರಿ ಮಾಡಿದವರು ಒಬ್ಬರಿದ್ದಾರೆ. ಅವರು ಒಟ್ಟು 0.9%. ಆ 31 ಮಂದಿಯಲ್ಲಿ ಪಿಯುಸಿ ಮಾಡಿದ ನಾಲ್ಕು ಮಹಿಳೆಯರಿದ್ದಾರೆ. ಶಿಕ್ಷಿತರಲ್ಲಿ ಕಿರಿಯ ಪ್ರಾಥಮಿಕ ಶಿಕ್ಷಣ ಪಡೆದವರು 274 ಮಂದಿ (8.1%) ಇದ್ದರೆ, ಹಿರಿಯ ಪ್ರಾಥಮಿಕ ಶಿಕ್ಷಣ ಪಡೆದವರು 74 ಮಂದಿ (2.2%), ಪ್ರೌಢ ಶಿಕ್ಷಣ ಪಡೆದವರು 120 ಮಂದಿ (3.5%) ಇದ್ದಾರೆ. ಬಿಟ್ಟಿ ಚಾಕ್ರಿ ಮಾಡುವವರಲ್ಲಿ ಶಿಕ್ಷಿತರ ಲಿಂಗವಾರು ಹಂಚಿಕೆಯ ಆಳವಾದ ಅಧ್ಯಯನ ಬಿಟ್ಟಿ ಚಾಕ್ರಿಯ ಸ್ವರೂಪದ ಬಗ್ಗೆ ಕೆಲವು ಬೆಳಕು ಚೆಲ್ಲುವ ಸಾಧ್ಯತೆ ಇದೆ.

ಬಿಟ್ಟಿ ಚಾಕ್ರಿ ಮತ್ತು ದಲಿತರು

ಬಿಟ್ಟಿ ಚಾಕ್ರಿಯು ದಲಿತ ಸಮುದಾಯಗಳಲ್ಲೇ ಕಂಡುಬರುವಂತಹದ್ದು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಲ್ಲಿ ಬಿಟ್ಟಿ ಚಾಕ್ರಿ ಕುರಿತ ಆಳವಾದ

ಕ್ಷೇತ್ರಾಧ್ಯಯನ ಮಾಡುವ ಸಂದರ್ಭದಲ್ಲಿ ಕಂಡು ಬಂದ ಸಂಗತಿ ಎಂದರೆ ಅಲ್ಲಿ ದಲಿತ ಸಮುದಾಯದ ಒಳಪಂಗಡವಾದ ಮಾದಿಗ ಸಮುದಾಯಲ್ಲಿ ಮಾತ್ರ ಆ ಪದ್ಧತಿ ಇರುವುದು. ಇಡೀ ಜಿಲೆಯಲ್ಲೂ ಮತ್ತು ಅಕ್ಕ ಪಕ್ಕದ ಜಿಲ್ಲೆಗಳಾದ ಧಾರವಾಡ, ಗದಗ, ಹಾವೇರಿ, ಸಿರ್ಸಿ ಉಪವಿಭಾಗ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬಿಟ್ಟಿ ಚಾಕ್ರಿ ಪದ್ಧತಿ ಇದೆ ಮತ್ತು ಅದು ಮಾದಿಗ ಸಮುದಾಯದಲ್ಲಿ ಮಾತ್ರ ಎಂದೂ ಗುರುತಿಸಲಾಗಿತ್ತು. ಅವರ ಒಟ್ಟು ಸಂಖ್ಯೆ 2881 (85.06%). ಈ ಅಂಶವು ಬೀದರ್ ಜಿಲ್ಲೆ ಬಿಟ್ಟರೆ ಮೇಲೆ ವಿವರಿಸಲಾದ ಬಿಟ್ಟಿ ಚಾಕ್ರಿಯ ಬಾಹುಳ್ಯ ಮತ್ತು ಪ್ರಾದೇಶಿಕ ಹಂಚಿಕೆಗೂ ಹೊಂದಿ ಕೊಳ್ಳುತ್ತದೆ.

ಅಷ್ಟೇ ಅಲ್ಲ ಇದೇ ಪ್ರದೇಶಗಳಲ್ಲಿ ವ್ಯಾಪಕವಾಗಿ ಹಬ್ಬಿದ್ದ ಮತ್ತದರ ಪಳೆಯುಳಿಕೆಗಳು ಈಗಲೂ ಇರುವಂತಹ ಪದ್ಧತಿಯಾದ ದೇವದಾಸಿ ಪದ್ಧತಿಯು ಇದೇ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ. ಈ ಅಂಶವು ಉತ್ತರ ಕರ್ನಾಟಕದಲ್ಲಿ ದಲಿತರ ಶೋಷಣೆಯ ವಿವಿಧ ಮುಖಗಳನ್ನು ಅನಾವರಣಗೊಳಿಸುತ್ತದೆ. ಬಿಟ್ಟಿ ಚಾಕ್ರಿಯಲ್ಲಿ ತೊಡಗಿರುವ ಮಾದಿಗ ಕುಟಂಬಗಳೇ ಹಲವಾರು ರೀತಿಯ ಶೋಷಣೆಗಳಿಗೆ ಸಾಂಪ್ರದಾಯಿಕ ತುಳಿತಗಳಿಗೆ ಬಲಿಯಾಗಿರುವುದರಿಂದ ದೇವದಾಸಿಗಳಂತೆ ಬಿಟ್ಟಿಚಾಕ್ರಿಗಳಲ್ಲಿ ತೊಡಗಿರುವವರನ್ನು ಪ್ರತ್ಯೇಕವಾಗಿ ಗುರುತಿಸಿ ಅವರ ಸರ್ವಾಂಗೀಣ ಅಭಿವೃದ್ಧಿಗೆ ಸಂಕಲ್ಪವನ್ನು ಸರ್ಕಾರವು ತಾಳಬೇಕಾದ ಅನಿವಾರ್ಯತೆಯನ್ನು ಸೂರ್ಯನ ಬೆಳಕಿನಂತೆ ಸ್ಪಷ್ಟಪಡಿಸುತ್ತದೆ. ಮುಂದೆ ಚರ್ಚಿಸಿರುವ ಬಿಟ್ಟಿ ಚಾಕ್ರಿ ಮಾಡುವವರ ವೈಯಕ್ತಿಕ ಮತ್ತು ಕೌಟುಂಬಿಕ ಆರ್ಥಿಕ, ಶೈಕ್ಷಣಿಕ ಆಯಾಮಗಳೂ ಈ ಅಂಶಕ್ಕೆ ಬಲವಾದ ಬೆಂಬಲ ಕೊಡುತ್ತದೆ. ಜೀತ ಸಮಸ್ಯೆಯಂತೆ ಬಿಟ್ಟಿ ಚಾಕ್ರಿಯು ಕೇವಲ ದೌರ್ಜನ್ಯ ತಡೆಗಟ್ಟುವ ಅಪರಾಧಿಕ ಪ್ರಶ್ನೆಯಲ್ಲ. ಅದರ ಜೊತೆಗೆ ಮತ್ತು ಅದಕ್ಕಿಂತ ಮಿಗಿಲಾಗಿ ಅದು ಆ ಕುಟುಂಬ ಮತ್ತು ಆ ಕುಟಂಬಗಳು ಒಳಗೊಳ್ಳುವ ಸಮುದಾಯಗಳಲ್ಲಿ ತುರ್ತಾಗಿ ನಡೆಯಬೇಕಾಗಿರುವ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಆಗಬೇಕಾದ ಸರ್ವಾಂಗೀಣ ಉನ್ನತೀಕರಣದ ಗಂಭೀರ ಸಂಗತಿಯಾಗಿದೆ.

ಆದರೆ 15 ಜಿಲ್ಲೆಗಳಲ್ಲಿ ನಡೆಸಿದ ವ್ಯಾಪಕ ಸಮೀಕ್ಷೆ ನಂತರ ಕೆಲವೇ ಕೆಲವು ಜಿಲ್ಲೆಗಳಲ್ಲಿ ದಲಿತ ಸಮುದಾಯದೊಳಗಿನ ಇನ್ನೊಂದು ಪ್ರಬಲ ಒಳಪಂಗಡವಾಗಿರುವ ಹೊಲೆಯರೂ ಬಿಟ್ಟಿ ಚಾಕ್ರಿಯನ್ನು ಮಾಡುತ್ತಿರುವುದು ಕಂಡು ಬಂದಿದೆ. ಅವರು ಒಟ್ಟು ಕೇವಲ 491 ಮಂದಿ (14.5%) ಇದ್ದು ಅವರು ಬೀದರ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ (386 ಮಂದಿ) ಕಂಡುಬರುತ್ತಾರೆ. ಉಳಿದ ಕೆಲವು ಜಿಲ್ಲೆಗಳಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಇದ್ದಾರೆ. ಬಿಟ್ಟಿ ಚಾಕ್ರಿ ಕಡಿಮೆ ಇರುವ ಪ್ರದೇಶಗಳಲ್ಲೂ ಹೊಲೆಯ ಜಾತಿಯವರೇ ಕಂಡುಬಂದಿದ್ದಾರೆ. ಈ ಅಂಶಗಳ ಮಹತ್ವವನ್ನು ಅರಿಯಲು ಆಳವಾದ ಅಧ್ಯಯನ ಮತ್ತು ವಿಶ್ಲೇಷಣೆಯ ಅಗತ್ಯವಿದೆ.

ಜೊತೆಗೆ ಇಬ್ಬರು (0.06%) ಬೇಡ ಜನಾಂಗದವರು ಬಿಟ್ಟಿ ಚಾಕ್ರಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇವರ ಬಗ್ಗೆಯೂ ಅವರ ಕುಟುಂಬದ ಪರಂಪರೆಯ ಬಗ್ಗೆಯೂ ನಿಖರವಾದ ಮಾಹಿತಿಯನ್ನು ಪಡೆಯಬೇಕಾಗಿದೆ.

3. ಬಿಟ್ಟಿ ಚಾಕ್ರಿ ಮಾಡುವವರ ಇತರ ವಿವರಗಳು

ಬಿಟ್ಟಿ ಚಾಕ್ರಿ ಮಾಡಿಸಿಕೊಳ್ಳುವ ಮಾಲಿಕರ ಸಂಖ್ಯೆ:

ಬಿಟ್ಟಿ ಚಾಕ್ರಿ ಮಾಡುವವರಲ್ಲಿ ಹೆಚ್ಚಿನವರು (3272 – 96.6%) ಒಬ್ಬರೇ ಜಮೀನುದಾರರಿಗೆ ಸೇವೆ ಸಲ್ಲಿಸುತ್ತಿದ್ದರೆ ಕೇವಲ 115 ಮಂದಿ (3.4%) ಒಬ್ಬರಿಗಿಂತ ಹೆಚ್ಚು ಜಮೀನುದಾರರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ 87 ಮಂದಿ (2.57%) ಇಬ್ಬರು, 16 ಮಂದಿ (0.47%) ಮೂವರು, ಒಂಬತ್ತು ಮಂದಿ (0.27%) ನಾಲ್ವರು, ಇಬ್ಬರು (0.06%) ಐದು ಮಂದಿ ಮತ್ತು ಒಬ್ಬರು (0.03%) ಆರು ಮಂದಿ ಜಮೀನುದಾರರಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹೀಗೆ 3387 ಕುಟುಂಬಗಳು 3546 ಮಂದಿ ಮಾಲಿಕರಲ್ಲಿ ಬಿಟ್ಟಿ ಚಾಕ್ರಿ ಮಾಡುತ್ತಿದ್ದಾರೆ.

ಬಿಟ್ಟಿ ಚಾಕ್ರಿ ಮಾಡುತ್ತಿರುವವರ ಕಾಲ:

ದೀರ್ಘಕಾಲದಿಂದ ಅಂದರೆ ಹನ್ನೊಂದು ವರ್ಷಗಳಿಗಿಂತ ಮೇಲ್ಪಟ್ಟು ಬಿಟ್ಟಿ ಚಾಕ್ರಿ ಮಾಡುವವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಅವರು 2308 ಮಂದಿ (68.17%). ಆದರೆ ಹತ್ತು ವರ್ಷಗಳಿಗಿಂತ ಕಡಿಮೆ ಕಾಲ ಬಿಟ್ಟಿ ಚಾಕ್ರಿ ಮಾಡುತ್ತಿರುವವರು ಸುಮಾರು ಮೂರನೇ ಒಂದರಷ್ಟು (1078 – 31.83%). ಅದರಲ್ಲೂ ಐದು ವರ್ಷಗಳಿಗಿಂತ ಕಡಿಮೆ ಬಿಟ್ಟಿ ಚಾಕ್ರಿ ಮಾಡುವವರು ಕೇವಲ 364 ಮಂದಿ (10.75%) ಆಗಿದ್ದು ಆರರಿಂದ ಹತ್ತು ವರ್ಷ ಕಾಲ ಮಾಡುವವರು 21.08% (714 ಮಂದಿ) ಇದ್ದಾರೆ. 41ರಿಂದ 60 ವರ್ಷಗಳಿಂದ ಬಿಟ್ಟಿ ಚಾಕ್ರಿ ಮಾಡುವವರೇ 106 ಮಂದಿ ಇದ್ದಾರೆ. ಇದರಿಂದ ಸ್ಪಷ್ಟವಾಗುವ ಒಂದು ಅಂಶ ಬಿಟ್ಟಿ ಚಾಕ್ರಿಯು ಜಾತಿ ಪದ್ಧತಿಯ ನಿರ್ಬಂಧಕ್ಕೊಳಗಾಗಿದ್ದು ಅದು ದೀರ್ಘಕಾಲದಿಂದಲೇ ಆಚರಣೆಯಲ್ಲಿತ್ತು. ಅದು ರೂಢಿಗತ ಪುರಾತನ ಜಾತಿ ವ್ಯವಸ್ಥೆಯ ಒಂದು ಪಳೆಯುಳಿಕೆ ಎಂದೇ ಹೇಳಬಹುದು.

ಬಿಟ್ಟಿ ಚಾಕ್ರಿಯ ನಿರಂತರತೆ:

ಬಿಟ್ಟಿ ಚಾಕ್ರಿ ಮಾಡುವ ನಿರ್ಬಂಧವು ಸರ್ವಕಾಲಿಕ. ಅದಕ್ಕೆ ದಿನನಿತ್ಯ ಕೂಲಿ ಇಲ್ಲದಿದ್ದರೂ ಅದನ್ನು ತಪ್ಪಿಸಿ ಕೊಳ್ಳುವಂತಿಲ್ಲ. ಕೂಲಿ ಬದಲಿಗೆ ಅವರಿಗೆ ಸಿಗುವ ಸೌಲಭ್ಯಗಳ ಮೌಲ್ಯ ಅತ್ಯಲ್ಪ. ಈ ಕಾರಣಗಳಿಂದಲೇ ಬಿಟ್ಟಿ ಚಾಕ್ರಿ ಪದ್ಧತಿಯನ್ನು ಜೀತ ಪದ್ಧತಿ ರದ್ದತಿ ಕಾನೂನಿನ ಚೌಕಟ್ಟಿನಲ್ಲಿ ಪರಿಗಣಿಸುವ ಅವಶ್ಯಕತೆಯಿದೆ. ಬಿಟ್ಟಿ ಚಾಕ್ರಿ ಮಾಡುವವರು ತಮ್ಮ ಕಾಯಿಲೆ ಮತ್ತು ತಮ್ಮ ಕುಟುಂಬ ಅಥವಾ ಸಂಬಂಧಿಕರ ಕಾರ್ಯಗಳಿಗೆ ಬೇರೆ ಊರುಗಳಿಗೆ ಹೋಗಬೇಕಾಗಿರುವುದರಿಂದ ಆ ದಿನ ಅಥವಾ ದಿನಗಳಲ್ಲಿ ಬಿಟ್ಟಿ ಚಾಕ್ರಿ ಮಾಡಲಿಕ್ಕೆ ಹೋಗಲಿಕ್ಕಾಗದಿದ್ದಾಗ ಸಾಮಾನ್ಯವಾಗಿ ಕುಟುಂಬದ ಇತರರು ಅದನ್ನು ನೆರವೇರಿಸುವ ನಿರ್ಬಂಧವಿದೆ. ಬದಲಿಗೆ ಹೋಗುವ 2750 ಮಂದಿಯಲ್ಲಿ 1547 ಮಂದಿ (56.25%) ಕುಟುಂಬದ ಮಹಿಳಾ ಸದಸ್ಯರು. ಅವರ ಪ್ರಮಾಣ ಗಂಡಸು ಸದಸ್ಯರ ಸಂಖ್ಯೆಗಿಂತ (1203 – 43.75%) ಸ್ವಲ್ಪ ಹೆಚ್ಚಾಗಿದೆ. ಅವರ ಸಂಖ್ಯೆಗೆ ಸಹೋದರ/ರಿ (41) ಮತ್ತು ಮೊಮ್ಮಗ/ಳು (14) ಒಟ್ಟಿಗೆ 2% ಪ್ರಮಾಣದ ಕುಟುಂಬದ ಸದಸ್ಯರನ್ನು ಸೇರಿಸಿಲ್ಲ. ಬಿಟ್ಟಿಚಾಕ್ರಿ ಮಾಡುವ 3387 ಒಟ್ಟು ಮಂದಿಯಲ್ಲಿ ಗಂಡಸರ ಸಂಖ್ಯೆಯೇ (1963) ಅರ್ಧಕ್ಕಿಂತ ಮೇಲು (57.96%). ಆದರೂ

ಮಹಿಳೆಯರೂ ಸುಮಾರು ಪ್ರಮಾಣದಲ್ಲಿ ಬಿಟ್ಟಿ ಚಾಕ್ರಿ ಮಾಡುತ್ತಾರೆ (1424 – 42.04%). ಆದರೆ ಬದಲಿಗೆ ಹೋಗುವವರಲ್ಲಿ ಗಂಡಸಿರಿಗಿಂತ ಮಹಿಳೆಯರೇ ಹೆಚ್ಚು.

ಬಿಟ್ಟಿ ಚಾಕ್ರಿಯಲ್ಲಿ ಸಾಲದ ಪಾತ್ರ:

ಜೀತಪದ್ಧತಿಗೆ ಹೋಲಿಸಿದರೆ ಬಿಟ್ಟಿ ಚಾಕ್ರಿಯ ಅನುಷ್ಠಾನದಲ್ಲಿ ಸಾಲ ದೊಡ್ಡ ಪಾತ್ರ ವಹಿಸುವುದಿಲ್ಲ. ಅಥವಾ ಅದರ ಪಾತ್ರ ನಗಣ್ಯವೆಂದು ಹೇಳಬಹುದು. ಬಿಟ್ಟಿ ಚಾಕ್ರಿಯು ಸಂಪೂರ್ಣವಾಗಿ ಜಾತಿ ಮತ್ತು ಸಾಂಪ್ರದಾಯಿಕ ನಿರ್ಬಂಧಕ್ಕೊಳಗಾಗಿರುವುದು. ಆದರೂ ಸಾಲವೂ ಬಿಟ್ಟಿ ಚಾಕ್ರಿ ಮಾಡುವವರು ಮತ್ತವರ ಮಾಲಿಕರ ಸಂಬಂಧದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತದೆ. ಒಟ್ಟು 3387 ಮಂದಿಯಲ್ಲಿ ಕೇವಲ 150 ಮಂದಿ ಬೇರೆ ಬೇರೆ ಪ್ರಮಾಣದ ಸಾಲಗಳನ್ನು ಪಡೆದಿದ್ದಾರೆ.

ಸಾಲ ಪಡೆಯಲು ಕಾರಣಗಳು:

ಸಾಲ ಪಡೆಯುವ ಕಾರಣಗಳಲ್ಲಿ ಬೊಡ್ಡ ಪಾಲು ಕುಟುಂಬ ನಡೆಸಲು (49 – 32.7%) ಮತ್ತು ಮದುವೆ ಖರ್ಚುಗಳನ್ನು (46 – 30.7%) ನಿಭಾಯಿಸಲು. ನಂತರದ ಸ್ಥಾನ ಮನೆಕಟ್ಟುವುದಕ್ಕಾಗಿದೆ (25 – 16.7%). ಕಾಯಿಲೆಗೋಸ್ಕರ ಆಗುವ ಖರ್ಚುಗಳನ್ನು (18 – 12%) ನಿಭಾಯಿಸುವುದು ನಂತರದ ಸ್ಥಾನ ಪಡೆಯುತ್ತದೆ. ಇವೆಲ್ಲವುಗಳು 92%ರಷ್ಟು ಆಗುತ್ತವೆ. ಉಳಿದ 8% ಪ್ರಮಾಣದಲ್ಲಿ ಬರುವ ಕಾರಣಗಳು ಶಿಕ್ಷಣಕ್ಕಾಗಿ 8 ಸಾಲಗಳು, ಮನೆಕಾರ್ಯಗಳನ್ನು ನಿಭಾಯಿಸಲು 3 ಮತ್ತು ಮನೆಯಲ್ಲಿಯ ಸಾವಿನ ಸಂದರ್ಭದ ಖರ್ಚನ್ನು ನಿಭಾಯಿಸಲು ಕೇವಲ ಒಂದೇ ಒಂದು ಸಾಲ ಕಂಡುಬರುತ್ತದೆ.

4. ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬದ ಸದಸ್ಯರ ಸಂಖ್ಯೆ, ಅವರ ಲಿಂಗವಾರು ಮತ್ತು ಶೈಕ್ಷಣಿಕ, ಕುಟುಂಬದ ಸದಸ್ಯರ ಕೆಲಸಗಳು, ಕುಟುಂಬದ ಮನೆ, ಜಮೀನು, ಇತರೆ ಆಸ್ತಿಗಳ ವಿವರಗಳು

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬಗಳ ಗಾತ್ರ ಮತ್ತು ಒಟ್ಟು ಸದಸ್ಯರು:

ಬಿಟ್ಟಿ ಚಾಕ್ರಿ ಮಾಡುವ 3387 ಕುಟುಂಬಗಳಲ್ಲಿ ಸರಿ ಅರ್ಧದಷ್ಟು (1693 – 50%) ಸರಾಸರಿ ಗಾತ್ರದ ಅಂದರೆ ನಾಲ್ಕು – ಐದು ಮಂದಿ ಇರುವ ಕುಟುಂಬಗಳು. ಉಳಿದ ಅರ್ಧ ಕುಟುಂಬಗಳು ಒಂದೇ ಇಬ್ಬರು–ಮೂವರು ಮಂದಿಯ ಸಣ್ಣ (1011) ಮತ್ತು ಒಬ್ಬನೇ ಅಥವಾ ಒಬ್ಬಳೇ ಇರುವ ತೀರಾ ಸಣ್ಣ (65) ಪ್ರಮಾಣದವು (ಒಟ್ಟಿಗೆ 11076 – 31.8%) ಅಥವಾ ಆರು–ಏಳು ಮಂದಿಯ ದೊಡ್ಡ (529) ಮತ್ತು ಎಂಟು–ಒಂಬತ್ತು ಮಂದಿಯ ಅತಿ ದೊಡ್ಡ (89) ಪ್ರಮಾಣದವು (ಒಟ್ಟಿಗೆ 618 – 18.2%). ತೀರಾ ಸಣ್ಣ ಮತ್ತು ಸಣ್ಣ ಪ್ರಮಾಣದ ಬಿಟ್ಟಿ ಚಾಕ್ರಿಯಲ್ಲಿರುವ ಸುಮಾರು ದೊಡ್ಡ ಸಂಖ್ಯೆಯಲ್ಲಿರುವ ಕುಟುಂಬಗಳ ವೈಶಿಷ್ಟ್ಯ, ಮಹತ್ವ ಅಥವಾ ಅವು ಸೂಚಿಸಬಹುದಾದ ಸಾಮಾಜಿಕ, ಆರ್ಥಿಕ ವೈಷಮ್ಯಗಳ ಬಗ್ಗೆ ಆಳವಾದ ಚಿಂತನೆ ನಡೆಸುವ ಅಗತ್ಯವಿದೆ.

3387 ಕುಟುಂಬಗಳಲ್ಲಿ ಒಟ್ಟು **14,264** ಮಂದಿ ಸದಸ್ಯರಿದ್ದಾರೆ. ಅವರಲ್ಲಿ ಗಂಡಸರು 7852 ಮಂದಿ (55.05%) ಮತ್ತು ಹೆಂಗಸರು 6412 ಮಂದಿ (44.95%) ಇದ್ದಾರೆ.

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬದ ಸದಸ್ಯರ ಶಿಕ್ಷಣ ಮಟ್ಟ:

ಬಿಟ್ಟಿ ಚಾಕ್ರಿ ಮಾಡುವವರ ಶಿಕ್ಷಣ ಮಟ್ಟದಂತೆ ಅವರ ಕುಟುಂಬದ ಸದಸ್ಯರ ಶೈಕ್ಷಣಿಕ ಮಟ್ಟವೂ ಅಷ್ಟೇನೂ ಆಶಾದಾಯಕವಲ್ಲ. ಒಟ್ಟು ಸದಸ್ಯರಾದ 14,264 ಮಂದಿಯಲ್ಲಿ 8,142 (57.08%) ಅನಕ್ಷರಸ್ತರೇ ಆಗಿದ್ದಾರೆ. ಶಿಕ್ಷಿತರಾದ 6,122 ಮಂದಿಯಲ್ಲಿ (42.92%) ಪ್ರಾಥಮಿಕ (ಕಿರಿಯ ಮತ್ತು ಹಿರಿಯ) ಶಿಕ್ಷಣ ಪಡೆದವರು 1,978 ಮಂದಿ (20.88%).

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬದ ಮನೆಗಳ ಪರಿಸ್ಥಿತಿ:

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬದ ಮನೆಗಳು ಒಂದು ರೀತಿಯಲ್ಲಿ ಸಮಾಧಾನಕರವಾದ ಸ್ಥಿತಿಯನ್ನು ತೋರಿಸುತ್ತವೆ. ಕೇವಲ 112 ಮಂದಿ (3.31%) ಗುಡಿಸಲಲ್ಲಿ ವಾಸವಾಗಿದ್ದರೆ 88 ಮಂದಿ (2.60%) ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಆದ್ದರಿಂದ 200 ಕುಟುಂಬಗಳಿಗೆ (5.9%) ಮಾತ್ರ ವಸತಿ ಅಭದ್ರತೆ ಈಗಲೂ ಕಾಡುತ್ತಿದೆ. ಉಳಿದ 94.1% ಮಂದಿ ಸ್ವಲ್ಪ ಮಟ್ಟಿಗಾದರೂ ಭದ್ರ ಗೋಡೆ ತಂಪುಕೊಡುವ ಸೂರು ಇರುವ ಮನೆಗಳನ್ನು ಹೊಂದಿದ್ದಾರೆ. ಆದರೆ ಇಲ್ಲಿಯೂ ಕೂಡಾ ನಾವು ಗಮನಿಸಬೇಕಾದ ಸಂಗತಿ ಏನೆಂದರೆ ಹೆಚ್ಚಿನ ಗೋಡೆ ಹೆಂಚುಗಳಿಂದ ಕೂಡಿದ ಮನೆಗಳು ಸರ್ಕಾರಿ ಅನುದಾನದಿಂದ ಕಟ್ಟಿದ ಮನೆಗಳಾಗಿದ್ದು ಇತರೆ ಸರ್ಕಾರಿ ಅನುದಾನಿತ ಮನೆಗಳಂತೆ ಅವು ಒಂದು ಉತ್ತಮ ಮನೆ ಅಲ್ಲದಿದ್ದರೂ ಸಾಧಾರಣ ಮನೆ ಎನಿಸಬೇಕಾದರೆ ಬೇಕಾಗಿದ್ದ ಪರಿಕರ, ಸವಲತ್ತುಗಳು ಮತ್ತು ಆಪ್ತ ಬದುಕಿಗೆ ಎಡೆಮಾಡಿಕೊಡುವ ಸ್ಥಳಾವಕಾಶಗಳಿಂದ ವಂಚಿತವಾಗಿವೆ.

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬದ ಭೂ ಒಡೆತನದ ಪ್ರಮಾಣ:

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬದ ಭೂಮಿ ಒಡೆತನದ ಪ್ರಮಾಣ ಗ್ರಾಮೀಣ ಪರಿಸರದಲ್ಲಿ ಅವರ ಅಭದ್ರ ಬದುಕನ್ನು ಹಿಡಿದು ತೋರಿಸುವ ಒಂದು ಕನ್ನಡಿ. ಭೂಮಿ ಇಲ್ಲದವರು 2650 ಮಂದಿ (78.23%). ಒಂದು ಎಕ್ರೆ ವರೆಗಿನ ಅತಿ, ಅತಿ ಸಣ್ಣ ಪ್ರಮಾಣದ ಒಣ ಭೂಮಿ ಹೊಂದಿದವರು ಇನ್ನೊಂದು 483 ಮಂದಿ (14.26%). ಒಂದರಿಂದ ಎರಡುವರೆ ವರೆಗಿನ ಅತಿ ಸಣ್ಣ ಪ್ರಮಾಣದ ಒಣ ಭೂಮಿ ಇರುವವರು 174 ಮಂದಿ (174 (5.14%). ಎರಡುವರೆಯಿಂದ ಐದು ಎಕ್ರೆ ತನಕ ಭೂಮಿ ಇದ್ದವರು ಕೇವಲ 71 ಮಂದಿ (2.1%). ಕೆಲವೇ ಕೆಲವು ಮಂದಿ ಅಂದರೆ ಒಂಬತ್ತು ಮಂದಿಗೆ (0.27%) 5–12 ಎಕ್ರೆ ಜಮೀನು ಇದೆ.

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬಗಳಲ್ಲಿರುವ ಸಾಕುಪ್ರಾಣಿಗಳು:

ಬಿಟ್ಟಿ ಚಾಕ್ರಿ ಮಾಡುವವರ ಕುಟುಂಬಗಳಲ್ಲಿ ಭೂಒಡೆತನದ ಕೊರತೆ ಮಾತ್ರವಲ್ಲ, ಗ್ರಾಮೀಣ ಬದುಕಿಗೆ ಭದ್ರತೆ ಒದಗಿಸುವ ಇನ್ನೊಂದು ಪ್ರಮುಖ ಸಾಧನವಾದ ದೊಡ್ಡ

ಸಾಕುಪ್ರಾಣಿಗಳ ಅಭಾವವೂ ಎದ್ದುಕಾಣುತ್ತದೆ. ಕೋಳಿಗಳನ್ನು ಪರಿಗಣೆಗೆ ತೆಗೆದುಕೊಳ್ಳದಿದ್ದರೆ ಯಾವುದೇ ದೊಡ್ಡ ಸಾಕು ಪ್ರಾಣಿ ಇಲ್ಲದ ಕುಟುಂಬಗಳು 2143 (63.3%). ಉಳಿದ 1244 ಕುಟುಂಬಗಳಲ್ಲಿ (36.7%) ಮಾತ್ರ ಸಣ್ಣ ಪ್ರಮಾಣದಲ್ಲಿ ಎಮ್ಮೆ, ಹಸು, ಎತ್ತು, ಕುರಿ, ಮೇಕೆಗಳಿವೆ.

ಬಿಟ್ಟಿ ಚಾಕ್ರಿ ಮಾಡುವವರ ಮನೆಗಳಲ್ಲಿರುವ ಬೆಲೆಬಾಳುವ ಪರಿಕರಗಳು:

ಮೇಲಿನ ಸಂಗತಿಗಳು ಪ್ರತಿಪಾದಿಸುವ ಬಿಟ್ಟಿ ಚಾಕ್ರಿ ಮಾಡುವವರ ದೀನ ಪರಿಸ್ಥಿತಿಯು ಅವರ ಮನೆಗಳಲ್ಲಿರುವ ಬೆಲೆಬಾಳುವ ಪರಿಕರಗಳನ್ನು ಗಮನಿಸುವಾಗಲೂ ಇನ್ನೂ ಖಚಿತಗೊಳ್ಳುತ್ತದೆ. 2829 ಕುಟುಂಬಗಳಲ್ಲಿ (83.5%) ಹೇಳಿಕೊಳ್ಳುವಂತಹ ಯಾವುದೇ ಬೆಲೆಬಾಳುವ ಪರಿಕರಗಳಿಲ್ಲ. ಉಳಿದ 558 ಕುಟುಂಬಗಳಲ್ಲಿಯ (16.5%) 256 ಮನೆಗಳಲ್ಲಿ (7.56%) ಕೇವಲ ಟಿವಿ ಮಾತ್ರ ಇದೆ. ಇವರನ್ನೂ ಸೇರಿಸಿ ಒಟ್ಟು 473 (13.98%) ಮನೆಗಳಲ್ಲಿ ಟಿವಿ ಇದೆ. ಅವರಲ್ಲಿಯ 213 ಮನೆಗಳಲ್ಲಿ (6.29%) ಟಿವಿ ಜೊತೆಗೆ ಈಗ ಸಾಮಾನ್ಯವಾಗಿರುವ ಯುವಕರಿಗೆ ಓಡಾಡಲು ಅನುಕೂಲಕರವಾಗಿರುವ ಸೈಕಲ್, ಬೈಕ್, ಸ್ಕೂಟಿಗಳಿವೆ. ಜೊತೆಗೆ ಇನ್ನೊಂದು 80 ಮನೆಗಳಲ್ಲಿ (2.36%) ಕೇವಲ ಸೈಕಲ್ ಅಥವಾ ಬೈಕ್ ಅಥವಾ ಸ್ಕೂಟಿಗಳಿವೆ. ನಾಲ್ಕೈದು ಮಂದಿ ಚಿನ್ನ ಇಟ್ಟುಕೊಂಡಿರುವುದನ್ನು ಒಪ್ಪಿಕೊಂಡಿದ್ದಾರೆ. ಒಬ್ಬರು ಎತ್ತಿನ ಬಂಡಿ ಇಟ್ಟು ಕೊಂಡಿದ್ದಾರೆ. ಇನ್ನೊಬ್ಬರು ಆಟೋ ಮಾಲಿಕರಾಗಿದ್ದಾರೆ. ಮಗದೊಬ್ಬರು ರಾಶಿ (ಕೊಯ್ಯುವ) ಮಶಿನ್ ಇಟ್ಟುಕೊಂಡಿದ್ದಾರೆ.

ಹೀಗೆ ಬಿಟ್ಟಿ ಚಾಕ್ರಿ ಮಾಡುವವರರು ಮಾತ್ರವಲ್ಲ ಅವರ ಕುಟುಂಬದ ಸದಸ್ಯರ ಅತಿ ಕಡಿಮೆ ಪ್ರಮಾಣದ ಶಿಕ್ಷಣ ಮಟ್ಟ ಮತ್ತು ಮೇಲಿನ ಹಲವಾರು ಸಂಗತಿಗಳು ಬಿಟ್ಟಿ ಚಾಕ್ರಿ ಮಾಡುವವರ ಅತ್ಯಂತ ದೈನ್ಯ ಪರಿಸ್ಥಿತಿಯನ್ನು ಖಾತ್ರಿ ಪಡಿಸುವಂತಿದ್ದು ಅವು ಅಭಿವೃದ್ಧಿ ಪಥದಲ್ಲಿ ದಾಪುಗಾಲು ಹಾಕ ಹೊರಟಿರುವ ಭಾರತವನ್ನೂ ಕರ್ನಾಟಕವನ್ನೂ ಅಣಕಿಸುವಂತಹವು. ಕೇವಲ ಮನೆಗಳ ಪರಿಸ್ಥಿತಿಯು ಸ್ವಲ್ಪ ಮಟ್ಟಿಗೆ ಒಂದು ಉತ್ತೇಜಕ ಸಂಗತಿಯಾಗಿದ್ದು ಉಳಿದೆಲ್ಲಾ ಸಂಗತಿಗಳು ಬಿಟ್ಟಿ ಚಾಕ್ರಿಯನ್ನು ದಲಿತರು ಮುಂದುವರೆಸಿಕೊಂಡು ಹೋಗಬೇಕಾಗಿರುವ ಅನಿವಾರ್ಯತೆಯನ್ನು ದೃಢಪಡಿಸುತ್ತದೆ. ಸ್ವತಂತ್ರ ವ್ಯವಸಾಯ ಮಾಡಲು ಜಮೀನು ಇಲ್ಲ. ಗ್ರಾಮೀಣ ಪ್ರದೇಶದಲ್ಲಿ ಕೂಲಿ ಬದುಕಿಗೆ ಆಸರೆಯಾಗಬಲ್ಲ ಒಂದರೆಡು ಎಮ್ಮೆ, ಹಸು, ಕುರಿ, ಮೇಕೆಗಳನ್ನು ಸಾಕಿ ಬಡತನದ ಬೇಗೆಯನ್ನು ತಣ್ಣಗಾಗಿಸಬಲ್ಲ ಸಾಧ್ಯತೆಯನ್ನೂ ನಾವು ಅವರಲ್ಲಿ ಕಾಣುವುದಿಲ್ಲ. ವಿಷಮ ಪರಿಸ್ಥಿತಿಗಳಲ್ಲಿ ನೆರವಿಗೆ ಬರಬಹುದಾದಂತಹ ವಸ್ತುಗಳಿದ್ದವರು ತೀರ ವಿರಳ. ಸಿಗುವ ಕೂಲಿಯೂ ಕನಿಷ್ಠ ವೇತನಕ್ಕಿಂತ ಬಹಳ ಕಡಿಮೆ. ಗಂಡಸರಿಗೆ ದಿನಕ್ಕೆ 150 ರೂ. ಆದರೆ, ಹೆಂಗಸರಿಗೆ ಕೇವಲ 100ರೂ. ಇಂತಹ ಹೀನಾಯ ಪರಿಸ್ಥಿತಿಯಲ್ಲಿ ತಮ್ಮ ಬಡತನವನ್ನು ನಿಭಾಯಿಸಲು ಬಿಟ್ಟಿ ಚಾಕ್ರಿಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಹಲವಾರು ದಲಿತ ಕುಟುಂಬಗಳು ಈಗಲೂ ಇಷ್ಟಪಡುವುದು ಸಾರ್ವಜನಿಕರಿಗೆ ಸರ್ಕಾರಕ್ಕೆ ನಾಚಿಕೆ ತರುವಂತಹದ್ದು.

5. ಬಿಟ್ಟಿ ಚಾಕ್ರಿ ಮಾಡುವವರ ಮಾಲಿಕರ ವಿವರಗಳು

ಮಾಲಿಕರ ಶೈಕ್ಷಣಿಕ ವಿವರ:

3387 ಮಂದಿ ದಲಿತರು ಬಿಟ್ಟಿ ಚಾಕ್ರಿ ಮಾಡುವ 3546 ಮಂದಿ ಮಾಲಿಕರಲ್ಲಿ 1800 ಮಂದಿ (50.8%) ಅಕ್ಷರಸ್ತರೂ 1746 (49.2%) ಅನಕ್ಷರಸ್ತರೂ ಸರಿಸಮನವಾಗಿಯೇ ಇದ್ದಾರೆ ಎಂದು ಹೇಳಿಕೊಳ್ಳಬಹುದು. ಶಿಕ್ಷಿತರಲ್ಲಿ ಪ್ರೌಢಶಾಲೆ, ಪಿಯುಸಿ ಮಾಡಿದವರೇ (1032 – 29.1%) ಅತಿ ಹೆಚ್ಚಿನ ಪ್ರಮಾಣದಲ್ಲಿದ್ದಾರೆ ಎಂದು ಹೇಳಬಹುದು. ಕಾಲೇಜು ಮತ್ತು ಉನ್ನತ ಶಿಕ್ಷಣ ಪಡೆದವರು 298 ಮಂದಿ (8.4%). ಪ್ರಾಥಮಿಕ ಶಾಲೆಗೆ ಹೋದವರು 268 ಮಂದಿ (7.6%). 202 ಮಂದಿಯನ್ನು (5.7%) ಕೇವಲ ಶಿಕ್ಷಿತರೆಂದು ಗುರುತಿಸಲಾಗಿದೆ. ಬಲಿಷ್ಠ ಜಾತಿಗಳಲ್ಲೂ ಅನಕ್ಷರತೆ ದೊಡ್ಡ ಪ್ರಮಾಣದಲ್ಲಿರುವುದು ಕೂಡಾ ಆತಂಕಕಾರಿ ಸಂಗತಿ.

ಮಾಲಿಕರ ಜಾತಿ:

ಮಾಲಿಕರಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶದ ಲಿಂಗಾಯತ, ರೆಡ್ಡಿ, ಒಕ್ಕಲಿಗ ಮುಂತಾದ ಬಲಿಷ್ಠ ಮತ್ತು ಮೇಲಿನ ವರ್ಗದವರಿಗೆ ಸೇರಿದ್ದಾರೆ. ಗೊಲ್ಲ, ಕುರುಬ, ಗಾಣಿಗ, ಮರಾಠ ತರಹದ ಹಿಂದುಳಿದ ವರ್ಗದ ಮನೆಗಳಿಗೂ ಬಿಟ್ಟಿ ಚಾಕ್ರಿ ಸೇವೆ ಸಲ್ಲಿಸುವ ರೂಢಿ ಇದೆ. ನಾಯಕ ಮತ್ತು ವಾಲ್ಮೀಕಿ ಹೆಸರುಗಳಿಂದಲೂ ಕರೆಯಿಸಿಕೊಳ್ಳುವ ಬೇಡರು ಈಗ ಅನುಸೂಚಿತ ಜನಾಂಗವೆಂದು ಗುರುತಿಸಿಕೊಂಡಿದ್ದರೂ ಸ್ವಲ್ಪ ಪ್ರಮಾಣದಲ್ಲಿ ಬಿಟ್ಟಿ ಚಾಕ್ರಿ ಮಾಡಿಸಿಕೊಳ್ಳುವುದು ಉತ್ತರ ಕರ್ನಾಟಕದಲ್ಲಿ ಅವರ ಆರ್ಥಿಕ ಪ್ರಾಬಲ್ಯವನ್ನು ತೋರಿಸುತ್ತದೆ.

ಮಾಲಿಕರ ಭೂಒಡೆತನ ಮತ್ತು ಅದರ ಪ್ರಮಾಣ:

ಮಾಲಿಕರಲ್ಲಿ ಏಳು ಮಂದಿ ಬಿಟ್ಟರೆ ಎಲ್ಲರೂ ಭೂ ಒಡೆಯರೇ ಎಂದು ಹೇಳಬಹುದು. ಕೇವಲ ಏಳು ಮಂದಿಯಲ್ಲಿ ಭೂಮಿ ಇಲ್ಲ. ಹತ್ತು ಎಕ್ರೆಯಿಂದ ಮೇಲ್ಪಟ್ಟು ಭೂಮಿ ಇರುವವರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರು 1236 ಮಂದಿ (71.71%). ಅವರಲ್ಲಿ 26–50 ಎಕ್ರೆ ಜಮೀನು ಇರುವವರು 773 ಮಂದಿ (21.99%). ಆದರೆ 51ಕ್ಕಿಂತ ಹೆಚ್ಚು ಎಕ್ರೆ ಹೊಂದಿರುವವರು 274 ಮಂದಿ (7.73%). 6–10ಎಕ್ರೆ ವರೆಗಿನವರು 708 ಮಂದಿ (19.97%). ಆದರೆ ಐದು ಎಕ್ರೆಗಿಂತ ಕಡಿಮೆ ಭೂಮಿ ಇರುವವರು 267 ಮಂದಿ (7.53%) ಮಾತ್ರ.

ಭೂಒಡೆತನ ಕೆಲವರಲ್ಲೇ ಕೇಂದ್ರಿತವಾಗಿದ್ದು ಬಹುತೇಕ ದಲಿತರು ಭೂವಂಚಿತರಾಗಿವುದು ಮಾತ್ರವಲ್ಲದೇ ಬೇರೆ ಆಸ್ತಿಪಾಸ್ತಿಗಳಿಲ್ಲದೇ ಶಿಕ್ಷಣದಿಂದ ಈಗಲೂ ವಂಚಿತರಾಗಿರುವುದು ಜಾತಿ ವ್ಯವಸ್ಥೆ, ಜೀತ ಪದ್ಧತಿ ಮತ್ತು ಈಗ ಬೆಳಕಿಗೆ ತಂದ ಬಿಟ್ಟಿ ಚಾಕ್ರಿಯಂತಹ ಕರಾಳ ಪರಿಸ್ಥಿತಿಗಳಲ್ಲಿ ಹೊಯ್ದಾಡುತ್ತಿರುವುದು ಸಂಬಂಧಪಟ್ಟವರ ಕಣ್ಣು ತೆರೆಯಬೇಕಲ್ಲವೇ?

ಬಿಟ್ಟಿ ಚಾಕ್ರಿ ಕುರಿತು ತೆಗೆದುಕೊಳ್ಳಬೇಕಾದ ನಿಲುವುಗಳು

1. ಬಿಟ್ಟಿ ಚಾಕ್ರಿ ಪದ್ಧತಿಯು ಸಾಂಪ್ರದಾಯಿಕವಾಗಿ ತಲೆತಲೆಮಾರುಗಳಿಂದ ಆಚರಣೆಗೆ ಬಂದಿದ್ದು ಮುಂದಿನ ಪೀಳಿಗೆಗೂ ಅದು ಮುಂದುವರಿಯುವಂತಹ ಲಕ್ಷಣಗಳನ್ನು ತೋರಿಸುತ್ತದೆ. ಈ ಆಚರಣೆಗಳನ್ನು ಮಾಡುವವರು ದಲಿತರಾಗಿದ್ದು ದಲಿತರಲ್ಲೂ ಮಾದಿಗ ಸಮುದಾಯದವರು ದೊಡ್ಡ ಪ್ರಮಾಣದಲ್ಲಿ ತೊಡಗಿರುವುದು ಕಂಡು ಬರುತ್ತದೆ. ಸ್ವಲ್ಪ ಮಟ್ಟಿಗೆ ಕೆಲವು ಇತರ ದಲಿತ ಜಾತಿಗಳೂ ಅದರಲ್ಲಿ ತೊಡಗಿಕೊಂಡಿವೆ. ಅವುಗಳಿಗೆ ವ್ಯಾಪಕವಾದ ಅತೃಪ್ತಿಯೂ ವಿರೋಧವೂ ಇದ್ದರೂ ಅದರ ಬಗ್ಗೆ ತಟಸ್ಥ ಭಾವನೆಯೂ ಅದರಲ್ಲಿ ಪ್ರಯೋಜನೆವಿದೆ ಎಂಬ ಭಾವನೆಗಳೂ ವ್ಯಕ್ತವಾಗಿವೆ. ಬಿಟ್ಟಿ ಚಾಕ್ರಿಯಲ್ಲಿ ಬದಲಾವಣೆಯಾಗುವ ಅಂಶಗಳೂ ತೋರಿ ಬರುತ್ತಿವೆ. ಒಟ್ಟಾರೆಯಾಗಿ ವೈಯಕ್ತಿಕವಾಗಿಯೂ ಸಾಮುದಾಯಿಕವಾಗಿಯೂ ಅದು ಅಹಿತಕರ, ಅವರ ಒಟ್ಟಾರೆ ಅಭಿವೃದ್ಧಿಗೆ ಮಾರಕ, ಮಾತ್ರವಲ್ಲ ಅವು ಸಂವಿಧಾನದ ಆಶಯಗಳಿಗೆ ವಿರೋಧವಾಗಿವೆ. ಅದನ್ನು ಸಂಪೂರ್ಣವಾಗಿ ನಿಲ್ಲಿಸುವ ಅಗತ್ಯವಿದೆ ಮತ್ತು ಅದಕ್ಕೋಸ್ಕರ ಹಲವಾರು ಕ್ರಮಗಳನ್ನು ಕೈಗೊಳ್ಳುವ ಅನಿವಾರ್ಯತೆ ಇದೆ.

2. ಬಿಟ್ಟಿ ಚಾಕ್ರಿ ಮಾಡುವವರನ್ನು ಜೀತದಾಳುಗಳನ್ನಾಗಿ ಸರ್ಕಾರವು ಇಷ್ಟರ ವರೆಗೆ ಪರಿಗಣಿಸಿಲ್ಲ. ಆದರೆ ಜೀತ ಪದ್ಧತಿಯ ಹಲವಾರು ಲಕ್ಷಣಗಳು ಅದರಲ್ಲಿ ಕಂಡು ಬರುತ್ತದೆ. ಆ ಸೇವೆ ಮಾಡಬೇಕಾಗಿರುವ ದಲಿತ ಕುಟುಂಬದ ಒಬ್ಬ ಅಥವಾ ಹೆಚ್ಚಿನ ವ್ಯಕ್ತಿಗಳು ಆ ಹಳ್ಳಿಯ ಒಂದು ಅಥವಾ ಹೆಚ್ಚಿನ ದೊಡ್ಡ ರೈತ ಕುಟುಂಬಗಳಿಗೆ ದಿವಸಾಗಲೂ ಮನೆಯಂಗಳ ಮತ್ತು ಹಟ್ಟಿಗಳನ್ನು ಸ್ವಚ್ಛಮಾಡಬೇಕು ಮತ್ತಿತರ ಸೇವೆಗಳನ್ನು ಸಲ್ಲಿಸಬೇಕು. ಸಾಮಾನ್ಯವಾಗಿ ಬೆಳಗಿನ ಬಿಟ್ಟಿ ಚಾಕ್ರಿಯನ್ನು ಒಂಬತ್ತು ಗಂಟೆಗೆ ಮುಗಿಸಿ ದಿನಗೂಲಿಗೆ ಹೋಗುವ ಸಾಧ್ಯತೆ ಇದೆ. ದಿನನಿತ್ಯದ ಬಿಟ್ಟಿ ಚಾಕ್ರಿ ಜೊತೆ ಮೈ ನೆರೆಯುವುದು, ಮದುವೆ, ಸಾವು, ತಿಥಿ, ಹಬ್ಬ ಹರಿದಿನ, ಜಾತ್ರೆಗಳ ಸಂಬರ್ಭದಲ್ಲಿಯೂ ಸುಗ್ಗಿ ಕಾಲದಲ್ಲಿಯೂ ಬಿಟ್ಟಿ ಚಾಕ್ರಿಯನ್ನು ಮಾಡಬೇಕಾಗುತ್ತದೆ. ಖಾಯಂ ಆಗಿ ಒಂದೇ ಮನೆಯಲ್ಲಿ ಕೆಲಸ ಮಾಡುವ ಸಾಂಪ್ರದಾಯಿಕವಾಗಿ ಬಂದ ನಿರ್ಬಂಧ ಬಿಟ್ಟಿ ಚಾಕ್ರಿಯಲ್ಲಿದೆ. ಬಿಟ್ಟಿ ಚಾಕ್ರಿ ಮಾಡುವವರೆಲ್ಲರೂ ದಲಿತರು ಮಾತ್ರವಲ್ಲದೇ ಅವರಲ್ಲಿಯೇ ತೀರಾ ಬಡವರಾಗಿದ್ದು, ವಾಸವಿರುವ ಮನೆ ಒಂದನ್ನು ಬಿಟ್ಟರೆ ಮನೆಯಲ್ಲಿ ಹೆಚ್ಚಿನವರಿಗೆ ಯಾವುದೇ ಬೆಲೆಬಾಳುವ ವಸ್ತು ಇರುವುದಿಲ್ಲ. ಭೂಮಿ ಇರುವುದಿಲ್ಲ. ಹಣದ ಅಗತ್ಯ ಬಿದ್ದರೆ ಭೂಮಾಲಿಕರನ್ನು ನಿರಂತರವಾಗಿ ಅವಲಂಬಿಸಬೇಕಾದ ಪರಿಸ್ಥಿತಿ. ಅಡಿಗೆ ಮಾಡಲು ಅಗತ್ಯವಿರುವ ಕಟ್ಟಿಗೆಗೆ, ಸಾಕಿದ ಒಂದೆರಡು ಕುರಿ ಮೇಕೆಗಳ ಮೇವಿನ ಸೊಪ್ಪು, ಹುಲ್ಲುಗಳಿಗೆ, ದಿನಕರ್ಮಗಳನ್ನು ಪೂರೈಸಲು ಊರವರ ಜಮೀನುಗಳ ಮೊರೆ ಹೋಗುವ ಅನಿವಾರ್ಯತೆ ಅವರ ಅಸಹಾಯಕತೆ ಮತ್ತು ಅವಲಂಬನೆಯನ್ನು ತೋರಿಸುತ್ತದೆ. ಆ ಅಸಹಾಯಕತೆಯನ್ನು ಬಳಸಿಕೊಂಡು ಬಿಟ್ಟಿ ಚಾಕ್ರಿ ನಿಲ್ಲಿಸುವ ದಲಿತರ ಮೇಲೆ ಬಹಿಷ್ಕಾರದ ಬೆದರಿಕೆಯನ್ನೂ ಹಾಕಲಾಗುತ್ತದೆ.

3. ಕೆಲಸಕ್ಕೆ ದಿನಗೂಲಿ ಇಲ್ಲ. ತಂಗಳು ಊಟ, ಚಹಾ–ಕಾಫಿ ಸಿಗುತ್ತದೆ. ವರ್ಷಕ್ಕೆ ಸುಗ್ಗಿ ಕಾಲದಲ್ಲಿ ಕೆಲವು ಚೀಲ ದವಸ ಧಾನ್ಯಗಳನ್ನು ಕೊಡಲಾಗುತ್ತದೆ. ವಿಶೇಷ ದಿನಗಳಲ್ಲಿ ಕೆಲಸಗಳು ಇಡೀ ದಿವಸ ಅಥವಾ ರಾತ್ರಿ–ಹಗಲೂ ಇರುತ್ತವೆ; ಕೆಲಸವು ಹಲವಾರು ದಿನಗಳಿಗೆ ಹಬ್ಬುತ್ತದೆ. ಆಗಲೂ ದಿನಗೂಲಿ ಇಲ್ಲ. ಬದಲಿಗೆ ಹೆಚ್ಚಿನ ಊಟ, ಬಟ್ಟೆಗಳು ಸಿಗುತ್ತವೆ. ರೋಗ ಬಂದರೂ ಇದನ್ನು ತಪ್ಪಿಸುವಂತಿಲ್ಲ. ಮನೆಯ ಯಾವನಾದರು ಒಬ್ಬ ಅದನ್ನು ಮಾಡಿಯೇ ತೀರಬೇಕು. ಕೆಲವು ಸಾರಿ ಒಂದು ದಿನ ತಪ್ಪಿದರೆ ಆ ಕೆಲಸಗಳನ್ನು ಮುಂದಿನ ದಿನ ನೆರವೇರಿಸಬೇಕಾಗುತ್ತದೆ. ಹೀಗಿದ್ದರೂ ಅವರಿಗೆ ದಿನ ನಿತ್ಯ, ವಿಶೇಷ ಸಂದರ್ಭಗಳಲ್ಲಿ ಮತ್ತು ವರ್ಷಾಂತ್ಯದಲ್ಲಿ ಸಿಗುವ ಕೆಲವು ಪ್ರಯೋಜನಗಳು ಮತ್ತು ದವಸ ಧಾನ್ಯಗಳು ಅವರ ಸೇವೆಗೆ ಸಲ್ಲಿಸಲಾಗುವ ಸರಿಯಾದ ವೇತನವಲ್ಲ. ಒಂದು ಕುಟುಂಬದ ಜೀವನ ನಿರ್ವಹಣೆಗೆ ಅವು ಸಾಲದು. ದಿನಗೂಲಿಯಿಂದ ಸಿಗುವ ಮಜೂರಿಯೂ ಬಹಳ ಕಡಿಮೆ. ಹೆಚ್ಚಿನ ಕಡೆ ದಿನಗೂಲಿಗೆ ಗಂಡಸರಿಗೆ 150ರಿಂದ 200 ರೂ. ಸಿಗುತ್ತಿದ್ದರೆ ಹೆಂಗಸರಿಗೆ 100ರಿಂದ 150 ರೂ. ಮಾತ್ರ ಸಿಗುತ್ತದೆ. ದಿನಗೂಲಿಯೂ ವರ್ಷಕ್ಕೆ 90ರಿಂದ 120 ದಿನ ಮಾತ್ರ ಸಿಗುತ್ತದೆ.

4. ಬಿಟ್ಟಿಚಾಕ್ರಿ ವಂಶಪಾರಂಪರ್ಯದಿಂದ ಬಂದುದು. ಹೊಸದಾಗಿ ಯಾರೂ ಬಿಟ್ಟಿಚಾಕ್ರಿಗೆ ಸೇರಿಕೊಳ್ಳುವುದಿಲ್ಲ. ಬಿಟ್ಟಿ ಚಾಕ್ರಿ ಇಲ್ಲದ ಗಂಡನ ಮನೆಯಿಂದ ಕಾರಣಾಂತರಗಳಿಂದ ಬಿಟ್ಟಿ ಚಾಕ್ರಿ ಮಾಡುತ್ತಿರುವ ತವರು ಮನೆಗೆ ಬಂದು ನೆಲಸುವ ಪರಿಸ್ಥಿತಿ ಬಂದರೆ ಆಗ ಆ ಮಹಿಳೆ ಮತ್ತವಳ ಮಕ್ಕಳು ಬಿಟ್ಟಿ ಚಾಕ್ರಿ ಮಾಡುವ ಒತ್ತಡಕ್ಕೆ ಒಳಗಾಗುತ್ತಾರೆ.

5. ಕೆಲವು ಸಾರಿ ಅಗತ್ಯ ಬಿದ್ದಾಗ ಮಾಲಿಕರು ಸಾಲವನ್ನು ಕೊಡುತ್ತಾರೆ. ಅದನ್ನು ಮನೆಯ ಯಾರಾದರೂ ಕೂಲಿ ಮಾಡಿ ತೀರಿಸಬೇಕು. ಆದರೆ ಸಾಲದಿಂದ ಬಿಟ್ಟಿ ಚಾಕ್ರಿ ಆರಂಭವಾಗುವುದಿಲ್ಲ. ಬಿಟ್ಟಿ ಚಾಕ್ರಿಯ ತಳಹದಿ ಸಂಪ್ರದಾಯ.

6. ಬಿಟ್ಟಿಚಾಕ್ರಿಯನ್ನು ಕೇವಲ ದಲಿತರು ಮಾತ್ರ ಮಾಡುತ್ತಾರೆ. ದಲಿತರಲ್ಲಿಯೂ ಅತಿ ನಿರ್ಗತಿಕರು ಮಾತ್ರ ಇದನ್ನು ಮಾಡುತ್ತಾರೆ. ಆರ್ಥಿಕ ಪರಿಸ್ಥಿತಿಯು ಸ್ವಲ್ಪ ಸುಧಾರಿಸಿದ ದಲಿತರು ಬಿಟ್ಟಿಚಾಕ್ರಿ ಮಾಡುವುದನ್ನು ಅವಮಾನದ ಸಂಗತಿಯೆಂದು ಪರಿಗಣಿಸುತ್ತಾರೆ. ಬಿಟ್ಟಿಚಾಕ್ರಿ ಮಾಡುವವರೂ ಅದೇ ರೀತಿ ತಿಳಿದು ಕೊಳ್ಳುತ್ತಾರೆ. ಆದರೆ ತಮ್ಮ ಬಡತನದ ಕಾರಣದಿಂದ ಅದನ್ನು ಮಾಡುವುದು ಅನಿವಾರ್ಯವೆಂದು ಒಪ್ಪಿಕೊಂಡಿದ್ದಾರೆ. ಬಿಟ್ಟಿಚಾಕ್ರಿ ಮಾಡುವ ಕುಟುಂಬಗಳಲ್ಲಿ ಬಿಟ್ಟಿ ಚಾಕ್ರಿ ಮಾಡದ ಕುಟುಂಬದವರು ಮದುವೆ ಸಂಬಂಧ ಇಟ್ಟುಕೊಳ್ಳಲು ಇಷ್ಟ ಪಡುವುದಿಲ್ಲ.

7. ಬಿಟ್ಟಿಚಾಕ್ರಿಗೂ ಜಾತಿ ವ್ಯವಸ್ಥೆಗೂ ಅತ್ಯಂತ ನಿಕಟ ಸಂಬಂಧವಿದೆ. ಬಿಟ್ಟಿಚಾಕ್ರಿ ಮಾಡುವವರೆಲ್ಲರೂ ದಲಿತರೇ. ದಲಿತರಲ್ಲೂ ಹೆಚ್ಚು ಬಡತನ ಮತ್ತು ಶೋಷಣೆಗೆ ಒಳಗಾದ ಸಮುದಾಯದವರೇ ಅದರಲ್ಲಿ ತೊಡಗಿದ್ದಾರೆ. ಬ್ರಿಟಿಷರ ಕಾಲಕ್ಕಿಂತ

ಮುಂಚೆ ಪ್ರಚಲಿತವಿದ್ದ ಜಾತಿ ಗುಲಾಮಿ ಪದ್ಧತಿಯಲ್ಲಿ ದಲಿತರು ಆರ್ಥಿಕವಾಗಿ ನಡೆದುಕೊಳ್ಳುತ್ತಿದ್ದ ವ್ಯವಸ್ಥೆಯ ಪಳೆಯುಳಿಕೆ ಬಿಟ್ಟಿ ಚಾಕ್ರಿ ಎಂದು ಪರಿಗಣಿಸಬಹುದು.

8. ಬಿಟ್ಟಿಚಾಕ್ರಿಯು ಎಷ್ಟೇ ಅವಮಾನದ ಸಂಗತಿಯಾದರೂ ಬಡ ದಲಿತ ಕುಟುಂಬಗಳಿಗೆ ಅದು ಒಂದು ರೀತಿಯ ಜೀವನಾಧಾರ ಒದಗಿಸಿ ಕೊಡುತ್ತದೆ. ಅಂತೆಲೇ ಬಿಟ್ಟಿಚಾಕ್ರಿ ಮಾಡುವವರಲ್ಲಿ ಕೆಲವರು ಅದನ್ನು ಒಪ್ಪಿಕೊಳ್ಳಲು ಮುಂದೆ ಬರುವುದಿಲ್ಲ. ಅದರಲ್ಲೂ ಬಿಟ್ಟಿ ಚಾಕ್ರಿಗೆ ವಿರೋಧವನ್ನು ದೊಡ್ಡ ಮಟ್ಟದಲ್ಲಿ ವ್ಯಕ್ತಪಡಿಸುವವರು ಬಿಟ್ಟಿ ಚಾಕ್ರಿಯ ದಿನನಿತ್ಯದ ಅವಮಾನಕರ ಕೆಲಸ ಮಾಡುತ್ತಿರುವ ಹೆಂಗಸರು. ಆದರೆ ಅವರ ಮನೆಯ ಕೆಲ ಗಂಡಸರು ಮೊದಮೊದಲು "ಬಿಟ್ಟಿಚಾಕ್ರಿ ಸರಿಯಿಲ್ಲ; ಅದನ್ನು ನಿಲ್ಲಿಸಬೇಕು" ಎಂದು ಸಹಮತ ವ್ಯಕ್ತಪಡಿಸಿದವರು ನಂತರ ಮಾಲಿಕರ ಒತ್ತಡಕ್ಕೆ ಬಲಿಯಾಗಿ "ಬಿಟ್ಟಿ ಚಾಕ್ರಿ ಬಗ್ಗೆ ಪ್ರಸ್ತಾಪ ಮಾಡಬೇಡಿ" ಎಂದು ತಮ್ಮ ಅಸಹಕಾರ, ವಿರೋಧವನ್ನು ವ್ಯಕ್ತಪಡಿಸುತ್ತಾರೆ. "ಬಿಟ್ಟಿಚಾಕ್ರಿಯನ್ನು ಜೀತ ಪದ್ಧತಿಯೆಂದು ತಮ್ಮನ್ನು ಅದರಿಂದ ಮುಕ್ತಗೊಳಿಸಿದರೆ ತಮ್ಮ ಜೀವನದ ಒಂದು ಆಧಾರ ತಪ್ಪಿದಂತಾಗುತ್ತದೆ" ಎಂಬುದು ಬಿಟ್ಟಿ ಚಾಕ್ರಿಯಲ್ಲಿ ತೊಡಗಿಸಿಕೊಂಡಿರುವ ಕೆಲವರ ಅಭಿಪ್ರಾಯ.

9. ಬಿಟ್ಟಿ ಚಾಕ್ರಿಯಿಂದ ಹೊರಬರಲು ಮುಖ್ಯ ಕಾರಣ ಸ್ವಲ್ಪವಾದರೂ ಶಿಕ್ಷಣ ಪಡೆದು ತಿಂಗಳ ಸಂಬಳ ಲೆಕ್ಕದಲ್ಲಿ ಸ್ವಲ್ಪ ಹೆಚ್ಚಿನ ಮಟ್ಟಗಿನ ನೌಕರಿಯನ್ನು ಖಾಸಗಿ ವಲಯದಲ್ಲೋ ಗ್ರಾಮ ಪಂಚಾಯತಿಯಲ್ಲೋ ಪಡೆದಿರುವುದನ್ನು ಗಮನಿಸುತ್ತೇವೆ. ಆದರೆ ಎಷ್ಟೋ ಕಡೆ ಶಾಲೆಗೆ ಹೋಗುವ ಮಕ್ಕಳನ್ನು ಪ್ರಾಥಮಿಕ ಹಂತದಲ್ಲೇ ನಿಲ್ಲಿಸಿ ಅವರನ್ನು ಬಿಟ್ಟಿ ಚಾಕ್ರಿಗೋ ಜೀತಕ್ಕೋ ಹಾಕಿರುವ ಪ್ರಕರಣಗಳು ಹೆಚ್ಚಿಗಿವೆ. ಹಿಂದೆ ಎಲ್ಲರೂ ಅನಕ್ಷರಸ್ಥರಾಗಿದ್ದು ಬಿಟ್ಟಿ ಚಾಕ್ರಿಯಲ್ಲೋ ಜೀತದಲ್ಲೋ ತೊಡಗಿರುತ್ತಿದ್ದರು. ಆದರೆ ಈಗ ಅಲ್ಪ ಸ್ವಲ್ಪ ಶಿಕ್ಷಣ ಪಡೆದರೂ ಬಿಟ್ಟಿ ಚಾಕ್ರಿ ಮತ್ತು ಜೀತಕ್ಕೆ ಹೋಗುವ ಪರಿಸ್ಥಿತಿ ನಿಂತಿಲ್ಲ. ಪ್ರಾಥಮಿಕ ಶಿಕ್ಷಣವೂ ಪೂರ್ತಿಯಾಗಿ ಮತ್ತು ಗುಣ ಮಟ್ಟದಲ್ಲಿ ಸಿಗದಿರುವುದು ನೋವಿನ ಸಂಗತಿ ಒಂದಾದರೆ ಉತ್ತಮ ಮತ್ತು ಉನ್ನತ ಶಿಕ್ಷಣದಿಂದ ಇಡೀ ಸಮುದಾಯಗಳೇ ಏಕೆ ವಂಚಿತರಾಗಬೇಕೆಂಬುದು ಆತಂಕದ ಸಂಗತಿ. ಜನರೆಲ್ಲಾ ಬಿಟ್ಟಿಚಾಕ್ರಿಯಲ್ಲಿ ತೊಡಗಿರುವುದೇ ಅದಕ್ಕೆ ಕಾರಣ ಎಂಬ ತೀರ್ಮಾನವೇ ಸರಿ ಎನಿಸುತ್ತದೆ.

10. ಕೇವಲ ಬೆಳಿಗ್ಗೆ ಮಾತ್ರ ಬಿಟ್ಟಿಚಾಕ್ರಿ ಮಾಡುವವರು ಅದೇ ಮಾಲೀಕರಲ್ಲಿ ಅಥವಾ ಬೇರೆಕಡೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಇದು ಒಂದು ರೀತಿಯಲ್ಲಿ ಬಿಟ್ಟಿ ಚಾಕ್ರಿ ಮಾಡುವವರಿಗೆ ಹೆಚ್ಚಿನ ಉದ್ಯೋಗದ ಅವಕಾಶ ನೀಡುವ ವ್ಯವಸ್ಥೆ ತರಹ ಕಾಣುತ್ತದೆ. ದಲಿತರ ಅಸಹಾಯಕ ಪರಿಸ್ಥಿತಿಯಲ್ಲಿ ಯಾವುದೇ ನೆರವು ಸ್ವಲ್ಪವಾದರೂ ಭದ್ರತೆಯನ್ನು ಒದಗಿಸುತ್ತದೆ. ಆದರೆ ಹೆಚ್ಚಿನ ಉದ್ಯೋಗದ ಅವಕಾಶವಿದ್ದರೆ ಹೆಚ್ಚಿನ ಆದಾಯದ ಅವಕಾಶವೂ ಇರಬೇಕು. ಆದರೆ ಅವರಿಗೆ

ಸಿಗುವ ಪ್ರತಿಫಲಗಳನ್ನು ಲೆಕ್ಕಾಚಾರ ಮಾಡಿದಾಗ ಅವರಿಗೆ ಸಿಗುವ ಪ್ರತಿಫಲ ಕನಿಷ್ಟ ವೇತನಕ್ಕಿಂತ ಬಹಳ ಕಡಿಮೆ ಇರುವುದು ಕಂಡು ಬರುತ್ತದೆ. ಎಷ್ಟೋ ಸಮಯ ದಿನನಿತ್ಯ ಬಿಟ್ಟಿ ಚಾಕ್ರಿ ಮಾಡಿದ ಮೇಲೆ ಬೇರೆ ದಿನಗೂಲಿಗೆ ಹೋಗಲು ಸಾಧ್ಯವಾಗಿರುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಬಿಟ್ಟಿ ಚಾಕ್ರಿ ಮಾಡುವಾಗ ದಿನಗಟ್ಟಲೆ ಕೆಲವು ಸಾರಿ 10–15 ದಿನ ಇಡೀ ದಿವಸ ಯಜಮಾನರ ಮನೆಯಲ್ಲಿಯೇ ಕೆಲಸಗಳನ್ನು ಮಾಡುತ್ತಾ ಸಮಯ ಕಳೆಯಬೇಕಾಗುತ್ತದೆ. ಸುಗ್ಗಿ ಸಮಯದಲ್ಲಂತೂ ಅವರು ಮಾಡುವ ಸೇವೆ ಒಂದು ತಿಂಗಳೂ ದಾಟಬಹುದು. ಬಿಟ್ಟಿ ಚಾಕ್ರಿ ಮಾಡುವುದರಿಂದ ಹೆಚ್ಚಿನ ಗಳಿಗೆಗೆ ಆಧಾರವಾಗಿದೆ ಎನ್ನುವುದಾದರೆ 'ಆ ಹೆಚ್ಚುವರಿ ಗಳಿಕೆಯಿಂದ ಅವರ ಜೀವನ ಮಟ್ಟ ಗಣನೀಯವಾಗಿ ಸುಧಾರಿಸಿದೆ; ಅವರು ಜೀವನದಲ್ಲಿ ಮುಂದುವರಿಯಲಿಕ್ಕೆ ಅದು ಸಹಾಯ ಮಾಡುತ್ತದೆ' ಎಂದಾಗಬೇಕು. ಆದರೆ ಈಗಲೂ ಅವರ ಜೀವನದ ಪರಿಸರ, ಅವರ ಶಿಕ್ಷಣದ ಮಟ್ಟ, ಅವರ ತೀವ್ರ ಬಡತನ ಇವೆಲ್ಲವುಗಳಿಗೆ ಅವರು ಬಿಟ್ಟಿ ಚಾಕ್ರಿಯಲ್ಲಿ ಮುಂದುವರಿಯುತ್ತಿರುವುದೇ ಒಂದು ಮುಖ್ಯ ಕಾರಣ ಎಂದು ತಿಳಿದುಕೊಳ್ಳುವ ತೀರ್ಮಾನಕ್ಕೆ ಬರಬೇಕಾಗುವುದು ಅನಿವಾರ್ಯ.

11. ಬಿಟ್ಟಿ ಚಾಕ್ರಿಯನ್ನು ಜೀತ ಪದ್ಧತಿ ರದ್ದತಿ ಕಾನೂನು 1976ರಡಿ ಅರ್ಥೈಸಿ ಬಿಟ್ಟಿ ಚಾಕ್ರಿ ಮಾಡುವವರಿಗೆ ಅದರಿಂದ ಸಿಗಬಹುದಾದ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಜೀತಕಾನೂನನ್ನು ಅರ್ಥೈಸಿದ ಪ್ರಕಾರ, 'ಒಂದು ದುಡಿಮೆಯನ್ನು ಎಷ್ಟು ಕಾಲ ಮಾಡಿದರೆ ಅದು ಜೀತದ ವ್ಯಾಖ್ಯಾನದೊಳಗೆ ಬರುತ್ತದೆ?' ಎಂಬುದಾಗಿ ನಿರ್ಧರಿಸುವುದಲ್ಲ. ಆ ರೀತಿಯ ಪ್ರಶ್ನೆಯೇ ಪ್ರಸ್ತುತವಲ್ಲ. ಜೀತ ಕಾನೂನಿನ ಪರಿಚ್ಛೇದ 2ಜಿಯಲ್ಲಿಯ ಜೀತ ಪದ್ಧತಿಯ ವ್ಯಾಖ್ಯಾನದಲ್ಲಿ ಜೀತ ಮಾಡುವ ಒಟ್ಟು ಸಮಯದ ಬಗ್ಗೆಯೇ ಪ್ರಸ್ತಾಪವಿಲ್ಲ. ನಿರ್ಬಂಧಕ್ಕೊಳಗಾಗಿ ಸ್ವಾತಂತ್ರ್ಯ ಇಲ್ಲದೇ ಮತ್ತು ವೇತನವಿಲ್ಲದೇ ಅಥವಾ ನಾಮ ಮಾತ್ರ ಮಜೂರಿಗೆ ದುಡಿಯುವುದೇ ಜೀತ.

ಜೀತ ಕಾನೂನಿನ ಪ್ರಕಾರ ಒಂದು ದುಡಿಮೆ ಜೀತದ ದುಡಿಮೆ ಎನಿಸಬೇಕಾದರೆ ಮುಖ್ಯವಾಗಿ ಇರಬೇಕಾದ ಅಂಶಗಳು ಎಂದರೆ: 1. ಜೀತದ ದುಡಿಮೆ ಬಿಟ್ಟು ಬೇರೆ ಕಡೆ ಕೆಲಸಕ್ಕೆ ಹೋಗುವ ಸ್ವಾತಂತ್ರ್ಯವಿಲ್ಲದಿರುವುದು; 2. ಮಾಡುವ ಕೆಲಸಕ್ಕೆ ವೇತನ ಸಿಗದೇ ಇರುವುದು ಅಥವಾ ಒಂದು ವೇಳೆ ಸಿಕ್ಕರೆ ಅದು ಕನಿಷ್ಟ ವೇತನ ಅಥವಾ ಪ್ರಚಲಿತ ವೇತನಕ್ಕೆ ಕಡಿಮೆ ಇರುವುದು.

ಒಡಿಶಾದ ಬರ್ತನ್ ಆಚರಣೆಯಲ್ಲಿರುವ ಕ್ಷೌರಿಕರು ಒಂದೊಂದು ಮನೆಗೆ ಕೆಲವೇ ಗಂಟೆಗಳ ಕಾಲ ಕ್ಷೌರ ಮತ್ತಿತರ ಸೇವೆ ನೀಡಿದರೂ ಕೂಡಾ ಕ್ಷೌರದ ಜೊತೆಗೆ ಮಾಡಬೇಕಾದ ಸೇವೆಗಳು ಅವಮಾನವೀಯವಾಗಿದ್ದು ಅವುಗಳಿಗೆ ಸಿಗುವ ಸಂಭಾವನೆಯು ವರ್ಷಕ್ಕೆ 15 ಕಿ. ಗ್ರಾಂ ಭತ್ತದಷ್ಟು ಕ್ಷುಲ್ಲಕವಾಗಿದ್ದು ಅವರು ಆ ಸೇವೆಗಳನ್ನು ಮಾಡಲೇ ಬೇಕೆಂಬ ಸಾಂಪ್ರದಾಯಿಕ ನಿರ್ಬಂಧವಿರುವುದರಿಂದ ಆ ನಿರ್ಬಂಧದ ಜೊತೆಗೆ ಅವರು ಬೇರೆ ಬೇರೆ ಕಡೆ ಕೆಲಸ ಮಾಡುವ

ಸ್ವಾತಂತ್ರ್ಯವಿದ್ದರೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವೂ ಒಡಿಶಾ ಸರ್ಕಾರವೂ ಒಡಿಶಾ ರಾಜ್ಯ ಮಾನವ ಹಕ್ಕುಗಳ ಆಯೋಗವೂ ಬರ್ತನ್ ಒಂದು ಜೀತ ಪದ್ಧತಿ ರದ್ದತಿ ಕಾನೂನಿನಡಿ ಬರುವ ಆಚರಣೆಯಾಗಿದೆ ಎಂಬ ತೀರ್ಮಾನಕ್ಕೆ ಕೆಲವೇ ವರ್ಷಗಳ ಹಿಂದೆ ಬಂದಿವೆ.

ಅದೇ ರೀತಿಯಲ್ಲಿ ಕರ್ನಾಟಕದ ಬಿಟ್ಟಿ ಚಾಕ್ರಿಯಲ್ಲಿ ತಲೆತಲೆಮಾರುಗಳ ಮೇಲೆ ವಿಧಿಸಬಹುದಾದ ನಿರ್ಬಂಧವಿದೆ; ಅವರಿಗೆ ಸಿಗುವ ದವಸಧಾನ್ಯಗಳ ರೂಪದ ಪ್ರತಿಫಲವು ಅವರ ಸೇವೆಗಳಿಗೆ ತಕ್ಕುದಾದ ಪ್ರತಿಫಲವಲ್ಲ; ಜೊತೆಗೆ ಬಿಟ್ಟಿ ಚಾಕ್ರಿ ಮಾಡುವ ಬಹುತೇಕ ಎಲ್ಲರ ಅಭಿಪ್ರಾಯದಲ್ಲಿ ಮತ್ತು ಇತರರ, ಪ್ರತ್ಯೇಕವಾಗಿ ಅವರ ಜೊತೆ ನೆಂಟಸ್ತಿಕೆ ಬೆಳೆಸಬೇಕೆಂದು ಇಷ್ಟ ಪಡುವವರ ಪ್ರಕಾರ ಅದು ತುಂಬಾ ಅವಮಾನದ ಸಂಗತಿಯಾಗಿದೆ. ಈ ಎಲ್ಲಾ ಕಾರಣಗಳಿಂದ ಬಿಟ್ಟಿ ಚಾಕ್ರಿಯನ್ನು ಜೀತ ಪದ್ಧತಿ ರದ್ದತಿ ಕಾನೂನಿನಡಿ ಬರಬೇಕಾದ ಆಚರಣೆ ಎಂದೇ ಪರಿಗಣಿಸಬೇಕಾಗುತ್ತದೆ. ಜೊತೆಗೆ ಬಿಟ್ಟಿ ಚಾಕ್ರಿಯಲ್ಲಿರುವವರ ಮನೆಗಳು, ಅವರ ಆದಾಯ ಮೂಲಗಳು ಮತ್ತು ಅವರ ಒಟ್ಟು ಜೀವನವನ್ನು ಗಮನಿಸಿದಾಗ ಅವರು ಇಂತಹ ಪರಿಸ್ಥಿತಿಯಲ್ಲಿ ಸ್ವತಂತ್ರ ಭಾರತದ 70 ವರ್ಷಕ್ಕೂ ಮೀರಿದ ನಂತರದ ಅವಧಿಯಲ್ಲಿ ಬಾಳುತ್ತಿರಬೇಕಾದರೆ ಅವರು ಬಿಟ್ಟಿ ಚಾಕ್ರಿಯಲ್ಲಿ ತೊಡಗಿರುವುದರಿಂದಲೇ ಅವರು ಅಂತಹ ಜೀವನವನ್ನು ನಡೆಸುವ ಅನಿವಾರ್ಯತೆಗೆ ಒಳಗಾಗಿದ್ದಾರೆ ಎಂದೇ ತಿಳಿದು ಕೊಳ್ಳಬೇಕಾಗುತ್ತದೆ.

2013ರ ಜೂನ್ ತಿಂಗಳಲ್ಲಿ ಕರ್ನಾಟಕದಲ್ಲಿ ಜೀತ ಪದ್ಧತಿ ರದ್ದತಿ ಕಾನೂನಿನ ಅನುಷ್ಠಾನವನ್ನು ನಿರ್ವಹಿಸುತ್ತಿರುವ ಜವಾಬ್ದಾರಿ ಇರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ರಾಜ್ಯದಲ್ಲಿಯ ಜೀತ ಪದ್ಧತಿಯ ಪರಿಶೀಲನೆಗೆಂದು ರಚಿಸಲಾದ ರಾಜ್ಯ ಮಟ್ಟದ ಸಮಿತಿಯ ವರದಿಯನ್ನು 2015ರ ಸಪ್ಟೆಂಬರ್ 24ರಂದು ವಿಧಾನಸೌಧದಲ್ಲಿ ಬಿಡುಗಡೆಗೊಳಿಸಿದ್ದರು. ಅದರಲ್ಲಿಯ 22 ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಒಂದು ತಿಂಗಳೊಳಗೆ ಒಂದು ಕ್ರಿಯಾಯೋಜನೆ ಹಾಕಬೇಕೆಂದು ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದ್ದರು. ಆ ವರದಿಯ 22ನೇ ಶಿಫಾರಸ್ಸು ಬಿಟ್ಟಿ ಚಾಕ್ರಿ ಕುರಿತದ್ದಾಗಿದೆ. ಅದು ಹೀಗಿದೆ:

"ಜೀತಕ್ಕಿಂತಲೂ ಕ್ರೂರವಾಗಿರುವ ಬಿಟ್ಟಿ ಚಾಕರಿ ಎಂಬ ಮತ್ತೊಂದು ಸ್ವರೂಪದ ಜೀತ ಪದ್ಧತಿಯನ್ನು ಸಮೀಕ್ಷೆಯಿಂದ ಪತ್ತೆಹಚ್ಚಿ ಅದನ್ನು ಕೊನೆಗಾಣಿಸಬೇಕು.

"ವಿವರಣೆ: ಬಿಟ್ಟಿ ಚಾಕರಿ ಎನ್ನುವ ಜೀತ ಪದ್ಧತಿಯ ಮತ್ತೊಂದು ಶೋಷಣೆ ಉತ್ತರ ಕರ್ನಾಟಕದ ಕೆಲವು ಗ್ರಾಮಗಳಲ್ಲಿ ಇನ್ನೂ ಜೀವಂತವಿದೆ. ಜೀತದಾಳುಗಳ ಸಮೀಕ್ಷೆ ನಡೆಸುವಾಗ ಈ ಬಿಟ್ಟಿ ಚಾಕರಿ ಪದ್ಧತಿಯನ್ನು ಪತ್ತೆಹಚ್ಚಿ

ಜೀತ ಪದ್ಧತಿ (ರದ್ದತಿ) ಕಾಯ್ದೆ 1976ರ ಅನ್ವಯ ಕಾನೂನು ಕ್ರಮ ಕೈಗೊಳ್ಳಬೇಕು."

ಆದರೆ ಈ ಶಿಫಾರಸ್ಸಿನ ಪ್ರಕಾರ ಯಾವುದೇ ಕ್ರಿಯಾ ಯೋಜನೆಯನ್ನು ಸರ್ಕಾರವು ಈ ತನಕ ಹಾಕಿಲ್ಲ. ಆದ್ದರಿಂದ ಪ್ರಸ್ತುತ ಸಮೀಕ್ಷೆಯ ಪಲಿತಾಂಶಗಳ ಆಧಾರದ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಒಂದು ನೂತನ ಮತ್ತು ವ್ಯಾಪಕ ಸಮೀಕ್ಷೆಯನ್ನು ಕೈಗೊಳ್ಳಬೇಕು. ಈ ಸಮೀಕ್ಷೆಯಲ್ಲಿ ಕಂಡು ಬಂದ ಮತ್ತು ನೂತನ ಸಮೀಕ್ಷೆಯಿಂದ ಕಂಡುಬರಬಹುದಾದ ಬಿಟ್ಟಿ ಚಾಕ್ರಿ ಮಾಡುವ ಕುಟುಂಬಗಳಿಗೆ ಜೀತ ಪದ್ಧತಿ ರದ್ದತಿ ಕಾನೂನಿನ ಪ್ರಯೋಜನ ಸಿಗುವಂತೆ ನೋಡಿಕೊಳ್ಳಬೇಕು.

12. **ಬಿಟ್ಟಿ ಚಾಕ್ರಿಯನ್ನು ಜೀತ ಪದ್ಧತಿಯ ಒಂದು ರೂಪವೆಂದು ಪರಿಗಣಿಸಿ ಜೀತ ಪದ್ಧತಿ ರದ್ದತಿ ಕಾನೂನಿನಡಿ ಅವರನ್ನು ರಕ್ಷಿಸುವುದರ ಜೊತೆಗೆ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಅವರ ಸರ್ವಾಂಗೀಣ ಅಭಿವೃದ್ಧಿಗೆ ಒಂದು ವಿಶಿಷ್ಟವಾದ ಯೋಜನೆಯನ್ನು ಹಾಕಿ ಕಾರ್ಯಗತಗೊಳಿಸಬೇಕು. ಪ್ರತಿಯೊಂದು ಕುಟುಂಬಕ್ಕೆ ಐದು ಎಕ್ರೆ ಜಮೀನು ಕೊಡಿಸುವುದರ ಜೊತೆ ಅದನ್ನು ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡುವಂತೆ ಎಲ್ಲಾ ಸೌಲಭ್ಯ ಮತ್ತು ಪರಿಕರಗಳನ್ನು ಒದಗಿಸಿ ಕೊಡಬೇಕು. ಸ್ವ ಉದ್ಯೋಗಕ್ಕೆ ನೆರವು ಕೊಡಬೇಕು. ಸಮಾಧಾನಕರ ವಸತಿ ನಿರ್ಮಾಣಕ್ಕೆ ಸಹಾಯ ಒದಗಿಸಬೇಕು. ಮಕ್ಕಳು ಉತ್ತಮ ಶಿಕ್ಷಣ ಪಡೆಯುವ ಅವಕಾಶಗಳನ್ನು ಒದಗಿಸಬೇಕು.**

ಯಾವುದೇ ಸಮಸ್ಯೆಯ ಪರಿಹಾರಕ್ಕೆ ಆ ಸಮಸ್ಯೆಗೆ ಒಳಗಾದವರೇ ಜವಾಬ್ದಾರಿ ಮತ್ತು ನಾಯಕತ್ವ ವಹಿಸಿಕೊಳ್ಳಬೇಕು. ನಾಯಕತ್ವ ಬೆಳೆಯಲು ಈ ಸಮೀಕ್ಷೆಯಿಂದ ಬೆಳಕಿಗೆ ತಂದ ವಿಷಯಗಳು ಬಿಟ್ಟಿಚಾಕ್ರಿಗೆ ಒಳಗಾದ ಸಮುದಾಯದ ಪ್ರಜ್ಞೆಯನ್ನೂ ಅರಿವನ್ನೂ ಜಾಗೃತಗೊಳಿಸಬಹುದು. ನೇರವಾಗಿ ಬಿಟ್ಟಿಚಾಕ್ರಿಗೊಳಗಾದವರು ಮಾತ್ರವಲ್ಲ ಅನುಸೂಚಿತ ಜಾತಿ ಜನಾಂಗದ ಮುಖಂಡರು, ಜನನಾಯಕರು, ವಿಚಾರವಂತರು, ಪ್ರಜ್ಞಾವಂತರು, ಶಿಕ್ಷಿತರು ಹಾಗೂ ಎಲ್ಲಾ ವರ್ಗದ ಮತ್ತು ಸಮಾಜದ ಸಮಸ್ತ ನಾಯಕರು ಮತ್ತು ವಿಚಾರಸ್ಥರು ಇನ್ನೂ ಜೀವಂತವಿರುವ ಬಿಟ್ಟಿ ಚಾಕ್ರಿ ಪದ್ಧತಿ ಬಗ್ಗೆ ಕ್ರಿಯಾಶೀಲರಾಗಬೇಕಾಗುತ್ತದೆ. ಅದು ಕೇವಲ ಬಿಟ್ಟಿ ಚಾಕ್ರಿಗೊಳಗಾದವರ ಪ್ರಶ್ನೆ ಅಲ್ಲ. ಎಲ್ಲರ ಪ್ರಶ್ನೆಯೂ ಹೌದು.

ಬಿಟ್ಟಿ ಚಾಕ್ರಿ ಕುರಿತ ಸಮೀಕ್ಷೆ ವರದಿ ಸಾರಾಂಶದ ಪ್ರಕಟನೆ ಮತ್ತು ಸಮಾವೇಶಕ್ಕೆ ನೆರವು ನೀಡಿದವರು

ಕ್ರಸ	ಹೆಸರು	ವಿವರ
1	ಶ್ರೀ ಶ್ರೀಕಾಂತಗೌಡ ದುಂಡಿಗೌಡ್ರ	ಅಧ್ಯಕ್ಷರು, ಭಾರತಿ ಸೇವಾ ಸಂಸ್ಥೆ, ಬನ್ನೂರ, ಶಿಗ್ಗಾಂವ್
2	ಡಾ. ಮೃತ್ಯುಂಜಯ ಮಲ್ಲಪ್ಪ ತಿರ್ಲಾಪುರ	ಶಿಗ್ಗಾಂವ್
3	ಶ್ರೀ ಬಿ.ಎಸ್. ಹಿರೇಮಠ	ಪ್ರ.ಉ. ನಿರ್ದೇಶಕರು, ಜವಾರಿ ತಳಿ ಗೋವು ಸಂ. ಕೇಂದ್ರ, ಬಂಕಾಪುರ
4	ಶ್ರೀ ಬಸವರಾಜ ಜಕ್ಕನಕಟ್ಟಿ	ವಕೀಲರು, ಶಿಗ್ಗಾಂವ್
5	ಶ್ರೀ ಮಂಜುನಾಥ ವೈ. ತಿಮ್ಮಾಪುರ	ಸದಸ್ಯರು, ಎ.ಪಿ.ಎಮ್.ಸಿ., ಶಿಗ್ಗಾಂವ್
6	ಶ್ರೀ ಶಬ್ಬೀರ್ ಮಕಾಂದರ	ಸದಸ್ಯರು, ಪುರಸಭೆ, ಶಿಗ್ಗಾಂವ್
7	ಶ್ರೀ ರವಿ ಉಡುಪಿ	ಅಧ್ಯಕ್ಷರು, ಕರ್ನಾಟಕ ರಾಜ್ಯ ಪತ್ರ ಕರ್ತರ ಸಂಘ, ಶಿಗ್ಗಾಂವ್
8	ಶ್ರೀ ಡಾ. ಮಲ್ಲೇಶಪ್ಪ ಹರಿಜನ	ಅಧ್ಯಕ್ಷರು(ಮಾಜಿ), ಜಿ.ಪಂ., ಹಾವೇರಿ
9	ಶ್ರೀ ಶಿವಾನಂದ ಚ. ಮ್ಯಾಗೇರಿ	ಸಾಹಿತ್ಯ, ರಾಜ್ಯ ಪ್ರಶಸ್ತಿ ಪುರಸ್ಕೃತರು, ಶಿಗ್ಗಾಂವ್
10	ಶ್ರೀಮತಿ ಪ್ರೇಮಾ ಎಸ್. ಪಾಟೀಲ್	ಅಧ್ಯಕ್ಷರು, ಎ.ಪಿ.ಎಮ್.ಸಿ, ಶಿಗ್ಗಾಂವ್
11	ಶ್ರೀಮತಿ ದೀಪಾ ನಿ. ಅತ್ತಿಗೆರಿ, ಬಸವನಾಳ	ಉಪಾಧ್ಯಕ್ಷರು, ಜಿ.ಪಂ., ಹಾವೇರಿ
12	ಶ್ರೀ ಸುರೇಶ್ ಈ. ಹರಿಜನ	ಜೀವಿಕ ಜಿಲ್ಲಾ ಸಂಚಾಲಕರು, ಶಿಗ್ಗಾಂವ್
13	ಡಾ. ಪ್ರಶಾಂತ್ ಬಿ.ಕೆ.	ಸಾಯಿ ಮೆಡಿಕಲ್ಸ್, ಶಿಗ್ಗಾಂವ್
14	ಶ್ರೀ ವಿನಯ ಹುರಳಿಕುಪ್ಪಿ	ಅಧ್ಯಕ್ಷರು, ಕಾರ್ಯನಿರತ ಪತ್ರಕರ್ತರ ಸಂಘ, ಶಿಗ್ಗಾಂವ್
15	ಶ್ರೀ ಹಣ್ಮಂತು ಅಚ್ಚೋಲಾ	ಉಪಾಧ್ಯಕ್ಷರು (ಮಾಜಿ), ಗ್ರಾ.ಪಂ., ಅಚ್ಚೋಲಾ ಯಾದಗಿರಿ
16	ಶ್ರೀ ನಾಗೇಶ್ ಪುಟಪಾಕ	ಸದಸ್ಯರು, ತಾ.ಪಂ., ಯಾದಗಿರಿ
17	ಶ್ರೀಮತಿ ದೇವಮ್ಮ ಗಂಡ ಬಸಪ್ಪ ಜೋಗು	ಸದಸ್ಯರು, ಗ್ರಾ.ಪಂ., ಚಂಡರಿಕಿ, ಯಾದಗಿರಿ
18	ಶ್ರೀ ಶಾಂತಪ್ಪ ಖಾನಳ್ಳಿ	ವಕೀಲರು, ಯಾದಗಿರಿ
19	ಶ್ರೀ ವೆಂಕಟೇಶ	ಚೇಳೂರು, ಗುಡಿಬಂಡೆ
20	ಶ್ರೀಮತಿ ವರಲಕ್ಷ್ಮಿ	ವಿ.ಎ., ಸೋಮೇನಳ್ಳಿ, ಗುಡಿಬಂಡೆ
21	ಶ್ರೀ ನರಸಿಂಹಮೂರ್ತಿ	ಬಿಲ್ ಕಲೆಕ್ಟರ್, ಸೋಮೇನಳ್ಳಿ, ಗುಡಿಬಂಡೆ
22	ಶ್ರೀ ವೆಂಕಟೇಶ, ಗುಡಿಬಂಡೆ	ನಿರ್ವಾಹಕರು, ಕೆ.ಎಸ್.ಆರ್.ಟಿ.ಸಿ.
23	ಶ್ರೀ ದಾಸಪ್ಪ	ಹಾಸ್ಟೆಲ್ ಮೇಲ್ವಿಚಾರಕರು, ಗುಡಿಬಂಡೆ
24	ಶ್ರೀ ಶೇಷಾದ್ರಿ	ಸಮಾಜ ಕಲ್ಯಾಣ ಇಲಾಖೆ, ಗುಡಿಬಂಡೆ
25	ಶ್ರೀ ನಾರಾಯಣಸ್ವಾಮಿ ಗೆರಡಾಚಾರ್ಲಹಳ್ಳಿ,	ನಿರ್ವಾಹಕರು, ಬಿ.ಎಮ್.ಟಿ.ಸಿ., ಗುಡಿಬಂಡೆ
26	ಶ್ರೀಮತಿ ಅರ್ಚನಾ	ಪಿ.ಡಿ.ಒ., ಉಲ್ಲೋಡು, ಗುಡಿಬಂಡೆ
27	ಶ್ರೀ ಗೋಪಾಲ	ಪಿ.ಡಿ.ಒ. ದಪ್ತರ್, ಗುಡಿಬಂಡೆ
28	ಶ್ರೀಮತಿ ಗಂಗಮ್ಮ ಹನುಮಂತರಾಯಪ್ಪ	ಅಧ್ಯಕ್ಷರು, ಗ್ರಾ.ಪಂ., ಉಲ್ಲೋಡು, ಗುಡಿಬಂಡೆ
29	ಶ್ರೀ ನರಸಿಂಹಮೂರ್ತಿ	ಸದಸ್ಯರು, ಕೆ.ಡಿ.ಪಿ., ಬಾಗೇಪಲ್ಲಿ
30	ಶ್ರೀಮತಿ ಅನಸೂಯಮ್ಮ ಗಂಡ ಸಣ್ಣಪ್ಪ	ಉಲ್ಲೋಡು, ಗುಡಿಬಂಡೆ
31	ಶ್ರೀ ಪರಶಿವಮೂರ್ತಿ	ಸದಸ್ಯರು, ಮೈಸೂರು ಡಿ.ಸಿ.ಸಿ., ಕೃಷ್ಣಾಪುರ, ಹೆಚ್.ಡಿ. ಕೋಟೆ
32	ಶ್ರೀ ನಾಗರಾಜು	ಅಧ್ಯಕ್ಷರು (ಮಾಜಿ), ಗ್ರಾ.ಪಂ., ಕೆ. ಎಡ್ತೊರೆ, ಹೆಚ್.ಡಿ. ಕೋಟೆ
33	ಶ್ರೀ ಬೆಟ್ಟಸ್ವಾಮಿ	ಕುರ್ಣೆಗಾಲ, ಹೆಚ್.ಡಿ. ಕೋಟೆ
34	ಶ್ರೀ ಮಿಲ್ ನಾಗರಾಜು	ಸದಸ್ಯರು (ಮಾಜಿ), ಟೌನ್‌ಪಂ., ಹೆಚ್.ಡಿ. ಕೋಟೆ
35	ಶ್ರೀ ರಮೇಶ	ಗಿರಿಜನ ವಿಸ್ತರಣಾ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ, ಹೆಚ್.ಡಿ. ಕೋಟೆ
36	ಶ್ರೀ ಬಾಳಪ್ಪ ಮೇಗೇರಿ	ದಲಿತ ಮುಖಂಡರು, ಬೈಲಹೊಂಗಲ
37	ಶ್ರೀ ಬಸವರಾಜ ಬಾಳೆಗಟ್ಟ	ಅಧ್ಯಕ್ಷರು, ಗ್ರಾ.ಪಂ., ಸುತಗಟ್ಟಿ, ಬೈಲಹೊಂಗಲ
38	ಶ್ರೀ ರಮೇಶ ರಾಯಪ್ಪಗೋಳ	ರಾಜ್ಯಾಧ್ಯಕ್ಷರು, ಜೈ ಭೀಮ್ ಅಂಬೇಡ್ಕರ್ ವಾಣಿ, ನೇಸರ್ಗಿ, ಬೈಲಹೊಂಗಲ
39	ಶ್ರೀ ಸಿದ್ದು ಮೇತ್ರಿ	ಜಿಲ್ಲಾ ಕಾರ್ಯಾಧ್ಯಕ್ಷರು, ಮಾದಿಗ ಮೀಸಲಾತಿ ಹೋರಾಟ, ಬೆಳಗಾವಿ
40	ಶ್ರೀ ರುಕ್ಮವ್ವ ಮೇತ್ರಿ ಪಾಕಿನ್ ಹೊಸಕೇಶಿ	ಕಾರ್ಯಕರ್ತರು, ಮಾಸ ಸಂಸ್ಥೆ, ಸವದತ್ತಿ
41	ಶ್ರೀ ಪ್ರೆಸ್ ಆದೀಶ್	ಗೌರಿಬಿದನೂರು
42	ಶ್ರೀ ನಂಜುಂಡಪ್ಪ	ಜಿಲ್ಲಾ ಸಂಚಾಲಕರು, ಡಿ.ಎಸ್.ಎಸ್., ಗೌರಿಬಿದನೂರು
43	ಶ್ರೀ ಅಶ್ವತ್ತಪ್ಪ	ಡಿ.ಎಸ್.ಎಸ್., ಗೌರಿಬಿದನೂರು
44	ಶ್ರೀ ಬಾಲಕೃಷ್ಣಪ್ಪ	ಬಿ.ಎಸ್.ಪಿ., ಗೌರಿಬಿದನೂರು

45	ಶ್ರೀ ಪರಶುರಾಮ	ದಲಿತ ಮುಖಂಡರು, ಇಂಡಿ,
46	ಶ್ರೀ ಎ.ವಿ. ಪೂಜಪ್ಪ	ಅಧ್ಯಕ್ಷರು (ಮಾಜಿ), ಜಿ. ಪಂ, ಚಿಕ್ಕಬಳ್ಳಾಪುರ
47	ಶ್ರೀ ಅಂಜೇಶ್ ಎ.ಇ.	ಟೀಚರ್, ಸರ್ಕಾರಿ ಪ್ರಾಥಮಿಕ ಶಾಲೆ, ಯಳಿಯೂರು, ದೇವನಹಳ್ಳಿ ತಾ.
48	ಶ್ರೀ ಛಲಪತಿ	ಪಿ.ಡಿ.ಓ., ಗ್ರಾ. ಪಂ., ನಾರೇಮದ್ದೇಪಲ್ಲಿ, ಬಾಗೇಪಲ್ಲಿ
49	ಶ್ರೀ ನಾಗಪ್ಪ, ಹೊಸಹುಡ್ಯ,	ಸದಸ್ಯರು, ಗ್ರಾ. ಪಂ., ಘಂಟಂವಾರಪಲ್ಲಿ, ಬಾಗೇಪಲ್ಲಿ
50	ಶ್ರೀ ಚೌಡಪ್ಪ, ಹೊಸಹುಡ್ಯ	ಬಿ.ಸಿ., ಎಸ್.ಬಿ.ಐ., ಬಾಗೇಪಲ್ಲಿ ಟೌನ್
51	ಶ್ರೀ ನಾರಾಯಣಪ್ಪ	ಅಧ್ಯಕ್ಷರು, ಗ್ರಾ. ಪಂ., ಪರಗೋಡು, ಬಾಗೇಪಲ್ಲಿ
52	ಶ್ರೀ ರಮೇಶ್ ಬಾಬು	ಎ.ಇ., ಕೆ.ಪಿ.ಟಿ.ಸಿ.ಎಲ್., ಬಾಗೇಪಲ್ಲಿ ಟೌನ್
53	ಶ್ರೀ ವೆಂಕಟರವಣ	ಸದಸ್ಯರು, ಗ್ರಾ.ಪಂ., ಪುಲಿಗಲ್ಲು, ಚೇಳೂರು, ಬಾಗೇಪಲ್ಲಿ
54	ಶ್ರೀ ರಾಮಾಂಜಿ	ಶಿಕ್ಷಕರು, ಸರ್ಕಾರಿ ಹಿ.ಪ್ರಾ. ಶಾಲೆ, ನಾಗೇಮಟ್ಟೇಪಲ್ಲಿ, ಬಾಗೇಪಲ್ಲಿ
55	ಶ್ರೀ ಪೆದ್ದರೆಡ್ಡಪ್ಪ	ಸದಸ್ಯರು, ಗ್ರಾ.ಪಂ., ನಿಮ್ಮಕಾಯಲಹಳ್ಳಿ, ಚಿಂತಾಮಣಿ,
56	ಶ್ರೀ ಮಂಜುನಾಥ	ಮಾಲಿಕರು, ಇಲೆಕ್ಟ್ರಿಕ್ ಅಂಗಡಿ, ನಿಮ್ಮಕಾಯಲಹಳ್ಳಿ, ಚಿಂತಾಮಣಿ,
57	ಶ್ರೀ ವೆಂಕಟರವಣಪ್ಪ	ಪಿ.ಡಿ.ಓ., ಗ್ರಾ.ಪಂ., ಬಟ್ಲಹಳ್ಳಿ, ಚಿಂತಾಮಣಿ
58	ಶ್ರೀಮತಿ ರೂಪಕೃಷ್ಣಪ್ಪ	ಅಧ್ಯಕ್ಷರು, ಗ್ರಾ.ಪಂ., ಬಟ್ಲಹಳ್ಳಿ, ಚಿಂತಾಮಣಿ
59	ಶ್ರೀ ನರಸಿಂಹ ಕೆ.ವಿ., ಕಂಬಾಲಹಳ್ಳಿ	ಬಿ.ಎಫ್.ಟಿ., ತಾ.ಪಂ., ಚಿಂತಾಮಣಿ
60	ಶ್ರೀಮತಿ ಲಕ್ಷ್ಮೀಚಂದ್ರು	ಜೀವಿಕ ಸಂಪಿಗೆ ಸ್ವಸಸಂ., ಮಾದಮಂಗಲ, ಚಿಂತಾಮಣಿ
61	ಶ್ರೀ ಮಂಜುನಾಥ,	ಮಾಲಿಕರು, ಚಿ.ಎನ್.ಬಿ. ಬಸ್, ಚಿಲಕಲ್‌ನೆರ್ಪು, ಚಿಂತಾಮಣಿ
62	ಶ್ರೀ ವೆಂಕಟರವಣ ಎಸ್.ಟಿ., ಬುರುಡಗುಂಟೆ	ಫೀಲ್ಡ್ ಆಫಿಸರ್, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಂತಾಮಣಿ
63	ಶ್ರೀ ದೇವರಾಜ್	ಪಿ.ಡಿ.ಓ., ಗ್ರಾ.ಪಂ. ಜೇನಿಗದಲೆ, ಚಿಂತಾಮಣಿ
64	ಶ್ರೀ ಹೆಚ್. ಗುಂಡಪ್ಪ	ಅಧ್ಯಕ್ಷರು, ಗ್ರಾ.ಪಂ., ದೇವಸಮುದ್ರ, ಕಂಪ್ಲಿ
65	ಶ್ರೀ ರವಿಚಂದ್ರ, ಜಂಬುಕೊನಹಳ್ಳಿ, ಚಿಂ.	ಇಂಜಿನಿಯರ್, ಬೆಂಗಳೂರು
66	ಶ್ರೀ ಚಂದ್ರಪ್ಪ	ಶಿರಾ
67	ಶ್ರೀ ವೆಂಕಟೇಶ್	ಮಧುಗಿರಿ
68	ಶ್ರೀ ರಾಮಾಂಜಿ	ಮಾದಿಗ ದಂಡೋರ, ಮಧುಗಿರಿ
69	ಶ್ರೀ ಮೂರ್ತಿ	ವಕೀಲರು, ಮಧುಗಿರಿ
70	ಶ್ರೀ ಸಿದ್ದಯ್ಯ	ಎ.ಡಿ.ಓ., ತಾ.ಪಂ., ಮಧುಗಿರಿ
71	ಶ್ರೀ ಧನಂಜಯ	ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢ ಶಾಲೆ, ಪಾವಗಡ
72	ಶ್ರೀ ನರಸಿಂಹಮೂರ್ತಿ	ಉಪಾಧ್ಯಾಯರು, ಸರ್ಕಾರಿ ಪ.ಪೂ. ಕಾಲೇಜು, ಪಾವಗಡ
73	ಶ್ರೀ ರವಿ, ವೆಂಕಟಾಪುರ	ಸದಸ್ಯರು, ತಾ.ಪಂ., ಪಾವಗಡ
74	ಶ್ರೀ ಗೋವಿಂದಪ್ಪ	ದಲಿತ ಮುಖಂಡರು, ಐವಾರ್ಲಹಳ್ಳಿ, ಪಾವಗಡ
75	ಶ್ರೀ ಈರಣ್ಣ	ಸದಸ್ಯರು, ಗ್ರಾ.ಪಂ., ಕೋಣನಕುರಿಕೆ, ಪಾವಗಡ
76	ಶ್ರೀ ನಾಗರಾಜು	ಉಪಾಧ್ಯಕ್ಷರು, ಗ್ರಾ.ಪಂ., ಕೋಣನಕುರಿಕೆ, ಪಾವಗಡ
77	ಶ್ರೀ ಅಂಜಿನಪ್ಪ	ಅಧ್ಯಕ್ಷರು (ಮಾಜಿ), ಗ್ರಾ.ಪಂ., ದೊಮ್ಮತಮರಿ ಪಾವಗಡ
78	ಶ್ರೀ ನರಸಿಂಹಪ್ಪ	ದಲಿತ ಮುಖಂಡರು ಮರಿದಾಸನಹಳ್ಳಿ, ಪಾವಗಡ
79	ಶ್ರೀ ಹನುಮಂತರಾಯಪ್ಪ	ದಲಿತ ಮುಖಂಡರು, ದೇವರಬೆಟ್ಟ, ಪಾವಗಡ
80	ಶ್ರೀ ರಾಮಪ್ಪ	ದಲಿತ ಮುಖಂಡರು, ಕೋಟಗುಡ್ಡ ಪಾವಗಡ
81	ಶ್ರೀ ವಿನೋದ್	ದಲಿತ ಸಂಘಟಕರು, ಜಿಗಣಿ, ಆನೇಕಲ್
82	ಶ್ರೀ ಗೋಪಾಲ್ ಸಿ.	ದಲಿತ ಮುಖಂಡರು, ನಾಗನಾಯಕನ ಹಳ್ಳಿ, ಆನೇಕಲ್
83	ಶ್ರೀಮತಿ ಪದ್ಮಾವತಿ	ಸದಸ್ಯರು, ಗ್ರಾ.ಪಂ., ನೆರಳೂರು, ಆನೇಕಲ್
84	ಶ್ರೀ ರಘುಪತಿ ರೆಡ್ಡಿ	ಕಾಂಗ್ರೇಸ್ ಮುಖಂಡರು, ಗಡ್ಡಹಟ್ಟಿ ಆನೇಕಲ್

ಜೀವಿಕದ ಗುರಿ ಉದ್ದೇಶಗಳು

ಸಂಘಟನಾತ್ಮಕವಾಗಿ, ಜೊತೆಕಾರ್ಯದಲ್ಲಿ ಮತ್ತು ಅಧ್ಯಯನಗಳ ಮೂಲಕ
ಜೀತ. ಬಾಲ ಕಾರ್ಮಿಕ ಪದ್ಧತಿಗಳನ್ನು ತೊಡೆದು ಹಾಕಲು
ಅವುಗಳನ್ನು ಹುಟ್ಟುಹಾಕಿರುವ ಜಾತಿ, ವರ್ಗ, ಪುರುಷ ಪ್ರಧಾನ ವ್ಯವಸ್ಥೆಗಳನ್ನು ಎದುರಿಸುತ್ತಾ
ತಮ್ಮ ಹಿತರಕ್ಷಣೆಗೆ ಸಂವಿಧಾನದತ್ತ ದುರ್ಬಲ ವರ್ಗದದವರ ಹಕ್ಕುಗಳನ್ನು* ಪಡೆಯುವುದರ ಜೊತೆಗೆ
ಸ್ವಾವಲಂಬಿ ಮತ್ತು ಸಾಮೂಹಿಕ ಪ್ರಯತ್ನಗಳನ್ನು ಬೆಳೆಸುವಲ್ಲಿ
ಪರಿಸರದ ಸದ್ಬಳಕೆ ಮತ್ತು ಸಂರಕ್ಷಣೆ ಮಾಡುತ್ತಾ
ಈಗಿನ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣವನ್ನು (ಪಂಚಾಯತ್ ರಾಜ್‌ಅನ್ನು)
ಬಲಗೊಳಿಸುವುದರ ಜೊತೆಗೆ
ನೇರ ಪ್ರಜಾ ಪ್ರಭುತ್ವಕ್ಕೆ ಪ್ರಯತ್ನ ಮಾಡುತ್ತಾ
ಜೆನ್ನೋಟದ ಮೂಲಕ ತಮ್ಮ ಮೌಢ್ಯಗಳನ್ನು ಪ್ರಶ್ನಿಸುತ್ತಾ
ವೈಚಾರಿಕ ಹಾಗೂ ವೈಜ್ಞಾನಿಕ ನಿಲುವುಗಳನ್ನು ಬೆಳೆಸುವುದರ ಜೊತೆಗೆ
ಸಾಂಸ್ಕೃತಿಕ ಸಮೃದ್ಧಿಯನ್ನು ಕಾಪಾಡುತ್ತಾ, ವೈವಿಧ್ಯತೆಯನ್ನು ಗೌರವಿಸುತ್ತಾ
ಬಂಧನ ಮುಕ್ತ ಜೀವನದ
ಸಮತಾ ಸಮಾಜ ಕಟ್ಟುವುದು

*ಬಲತ್ಕಾರ ದುಡಿಮೆ ನಿಷೇಧ ಹಕ್ಕು. ಬಾಲ ದುಡಿಮೆ ನಿಷೇಧ ಹಕ್ಕು. ಶಿಕ್ಷಣ ಹಕ್ಕು. ಮಾಹಿತಿ ಹಕ್ಕು. ಜೀತ ಪದ್ಧತಿ ನಿಷೇಧ ಹಕ್ಕು. ಬಾಲ ಕಾರ್ಮಿಕತೆ ನಿಷೇಧ ಹಕ್ಕು. ಕನಿಷ್ಠ ವೇತನ ಹಕ್ಕು. ಸಮಾನ ವೇತನ ಹಕ್ಕು. ಕೆಲಸದ ಹಕ್ಕು. ರಾಷ್ಟ್ರೀಯ ಗ್ರಾಮೋದ್ಯೋಗ ಖಾತ್ರಿ ಹಕ್ಕು. ಆಹಾರ (ಪಡಿತರ) ಹಕ್ಕು. ಕುಡಿಯುವ ನೀರಿನ ಹಕ್ಕು. ಭೂಮಿ ಹಕ್ಕು. ಪಂಚಾಯತ್ ರಾಜ್‌ನಲ್ಲಿ ಭಾಗವಹಿಸುವಿಕೆ ಹಕ್ಕು. ಅನುಸೂಚಿತ ಜಾತಿ-ಜನಾಂಗ ದೌರ್ಜನ್ಯ ನಿಷೇಧ ಹಕ್ಕು. ಮಹಿಳಾ ದೌರ್ಜನ್ಯ ನಿಷೇಧ ಹಕ್ಕು. ಲಿಂಗ ಸಮಾನತೆ ಮತ್ತು ನ್ಯಾಯ ಹಕ್ಕು

ಮಾರ್ಗೋಪಾಯಗಳು

ಜಾಗೃತೀಕರಣ ಮತ್ತು ತರಬೇತಿ. ಸಂಘಟನೆ ಮತ್ತು ಒಕ್ಕೂಟ ರಚನೆ. ಆಂದೋಲನ ಮತ್ತು ಸಂಘರ್ಷ. ಒತ್ತಡ ಹಾಕುವುದು ಮತ್ತು ವಕಾಲತಿ. ಜೊತೆಕಾರ್ಯ ಮತ್ತು ಮಾಧ್ಯಮಗಳ ಸದ್ಬಳಕೆ. ಅಧ್ಯಯನ. ಸಂಶೋಧನೆ ಮತ್ತು ದಾಖಲಾತಿ. ಇವುಗಳಲ್ಲೆಲ್ಲಾ ಜಾಗೃತೀಕರಣ ಮತ್ತು ಸಂಘಟನೆಗಳು ಹೆಚ್ಚಿನ ಆದ್ಯತೆ ಪಡೆದಿರುವುವು. ಗುರಿಸಾಧನೆಗೆ ಚಟುವಟಿಕೆ-ಕಾರ್ಯಕ್ರಮಗಳನ್ನು ಒಕ್ಕೂಟದ ಸದಸ್ಯರ ಸಮಾಲೋಚನೆ ಮತ್ತು ನಾಯಕತ್ವದಲ್ಲೇ ನಡೆಸಲಾಗುವುದು.

ಜೀತ ವಿಮುಕ್ತಿ	ಸರ್ವರಿಗೂ ಸಮಪಾಲು	ಘನತೆಯ ಕೆಲಸ
ದೇಶಕ್ಕೆ ಶಕ್ತಿ	ಸರ್ವರಿಗೂ ಸಮಬಾಳು	ಕೆಲಸಕ್ಕೆ ನ್ಯಾಯ

ಜೀತ ನಿರ್ಮೂಲನೆಗೆ ಜೀವಿಕದ ಜೊತೆಸೇರ ಬಯಸಿದರೆ ಅಂತರ್ಜಾಲದ ಮುಂದಿನ ಕೊಂಡಿಯಲ್ಲಿಯ ನಮೂನೆಯನ್ನು ಭರ್ತಿ ಮಾಡಿ ಕಳುಹಿಸಿ

- (ಕನ್ನಡದಲ್ಲ) https://tinyurl.com/jeevikafree
- (ಇಂಗ್ಲಿಷ್ ನಲ್ಲ) https://tinyurl.com/jeevikaform

#1289, ಐಸಿರ್ ರಸ್ತೆ, ನಾಗರಭಾವಿ, ಬೆಂಗಳೂರು 560072
080-23210194, +91 9008487287, jeevika90@gmail.com
www.jeevikafree.org, Facebook: JeevikaFree

ಜೀವಿಕ
ಬಂಧನಮುಕ್ತ ಜೀವನ
ಜೀತ ವಿಮುಕ್ತಿ ಕರ್ನಾಟಕ



ಜೀವಿಕ

ಬಂಧನಮುಕ್ತ ಜೀವನ

ಜೀತ ವಿಮುಕ್ತಿ ಕರ್ನಾಟಕ

1289, ಐಸೆಕ್ ರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು 560072.
080-2320194, 9008487287
jeevika90@gmail.com
www.jeevikafree.org